# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ 2018


"ನಮ್ಮ ಎದುರಾಳಿಗಳಿಗೆ ಒಂದೇ ಒಂದು
ಯಲ್ಲೋ ಕಾರ್ಡ್ ತೋರಿಸಿದ್ದರೂ ನಾವೇ ಗೆಲ್ತಿದ್ವಿ"




ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 35
ಸಂಚಿಕೆ - 10
ಜುಲೈ - 2018

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಮಾರಿಯೋ ಮಿರಾಂಡ | ಶಿವಕುಮಾರ್ | 3 |
| ಓದುಗರ ಪತ್ರ | ರಾಘವೇಂದ್ರ ಭಟ್ಟ | 7 |
| ನಮ್ಮ ಚೀನಾ ಪ್ರವಾಸ | ಡಾ. ಡಿ.ವಿ. ಗುರುಪ್ರಸಾದ್ | 8 |
| ಸುಮ್ನೆ ಟೈಂ ಪಾಸ್ | ಬೇಲೂರು ರಾಮಮೂರ್ತಿ | 12 |
| ಹೆಸರಿನ ಸುತ್ತಮುತ್ತ | ಆನಂದ | 15 |
| ಬೀಳಿಸ್ಬಿಟ್ಟೆ | ವೈ.ಎನ್. ಗುಂಡೂರಾವ್ | 18 |
| ತುಂತುರು | ದಂನಆ | 22 |
| ವಿದ್ಯುತ್‌ಗೇ ಶಾಕ್! | ಗಣೇಶ ಹೆಗ್ಗಡೆ | 23 |
| ಆತುರದ ಅನಂತ | ವೈ.ಎಂ. ರಘುನಂದನ್ | 29 |
| ಆನ್– ಲೈನ್ ಅಜ್ಜಿ | ಇ.ಆರ್. ರಾಮಚಂದ್ರನ್ | 31 |
| ನಗೆಯು ಬರುತಿದೆ ನನಗೆ | ಎಂ.ಎಸ್.ಎಸ್. ಮೂರ್ತಿ | 34 |

ಮುಖಪುಟ ವ್ಯಂಗ್ಯಚಿತ್ರ – ಜಿ.ಎಸ್. ನಾಗನಾಥ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಕುಡಿಯುವ ನೀರಿನಲ್ಲಿ ಯುರೇನಿಯಂ – ಸುದ್ದಿ

**ಅಮೆರಿಕದ ಕೈವಾಡ?**

★★★

ಕಾಲಾ ಚಿತ್ರ ಪ್ರದರ್ಶನ ರದ್ದು – ಪತ್ರಿಕೆ

**ಅದರ ಕಾಲ ಇನ್ನೂ ಬಂದಿಲ್ಲ**

★★★

ಬಂಡಾಯಕ್ಕೆ 'ಕೈ' ನಡುಕ! – ಶೀರ್ಷಿಕೆ

**'ಆಹಾ' ಎನ್ನಬಹುದು!**

★★★

ಮೋದಿ ಚೀನಾ ಪ್ರವಾಸ – ಸುದ್ದಿ

**ಅದು ಪ್ರಯಾಸವಾಗದಿರಲಿ!!**

★★★

ವಿಶ್ವಕಪ್ ಆತಿಥ್ಯಕ್ಕೆ ರಷ್ಯಾ ಸಜ್ಜು – ಕ್ರೀಡಾ ಸುದ್ದಿ

**ಅದೇ ನಮಗೆ ಭಯ!!**

★★★

ಗಾಂಧಿ ಹೊರದಬ್ಬಿದ್ದ ರೈಲಿನಲ್ಲಿ ಸುಷ್ಮಾ ಪ್ರಯಾಣ – ಸುದ್ದಿ

**ಚರಿತ್ರೆ ಮರುಕಳಿಸುತ್ತಿದೆ!!**

★★★

ಕೆಲಸಮಾಡಲು ಖಾತೆ ಮುಖ್ಯವಲ್ಲ – ಮಾನ್ಯ ಮುಖ್ಯ ಮಂತ್ರಿಗಳು

**ಯಾವ 'ಖಾತೆ' ಎಂದು ಸ್ಪಷ್ಟೀಕರಿಸಲಿ!!**

★★★

ಬಿ.ಬಿ.ಎಂ.ಪಿ ಸಾಮಾನ್ಯ ಸಭೆ ನೇರಪ್ರಸಾರಕ್ಕೆ ಚಿಂತನೆ – ಸುದ್ದಿ

**ಇದು ಆಶ್ವಾಸನೆಯೋ, ಬೆದರಿಕೆಯೋ!!!**

ನಮ್ಮ ನಾಡಿನ ವ್ಯಂಗ್ಯಚಿತ್ರಕಾರರು

# ಮಾರಿಯೋ ಮಿರಾಂಡ

**– ಶಿವಕುಮಾರ್**




ನಮ್ಮ ನಾಡಿನ ಪ್ರತಿಭಾವಂತ ವ್ಯಂಗ್ಯಚಿತ್ರಕಾರರನ್ನು ಓದುಗರಿಗೆ ಪರಿಚಯಿಸುವ ಉದ್ದೇಶದಿಂದ ಈ ಮಾಲಿಕೆಯನ್ನು ಪ್ರಾರಂಭಿಸಿದೆ. ಗೋವೆಯಲ್ಲಿ ಜನಿಸಿದ ವ್ಯಂಗ್ಯಚಿತ್ರಕಾರ ಮಾರಿಯೋ ಮಿರಾಂಡ (1926 – 2011)ಈ ಸರಣಿಯ ಮೊದಲ ಆಯ್ಕೆ.

ಮಾರಿಯೋಗೆ ಚಿಕ್ಕ ವಯಸ್ಸಿನಿಂದ ಚಿತ್ರರಚನೆಯಲ್ಲಿ ಆಸಕ್ತಿ. ಮನೆಯ ಗೋಡೆಯನ್ನೆಲ್ಲಾ ಮಗು ತನ್ನ ಕಲಾಕೃತಿಗಳಿಂದ ಅಲಂಕರಿಸುವುದನ್ನು ನೋಡಲಾಗದೇ ಅವನ ತಾಯಿ ಮಾರಿಯೋಗೆ ಒಂದು ನೋಟ್‌ಬುಕ್ಕನ್ನು ಚಿತ್ರರಚನೆಗಾಗಿಯೇ ಕೊಡಿಸಿದ್ದಳಂತೆ. ಬೆಂಗಳೂರಿನ ಸೇಂಟ್ ಜೋಸೆಫ್ಸ್ ಬಾಯ್ಸ್ ಹೈಸ್ಕೂಲಿನಲ್ಲಿ ಓದಿದ ಮಾರಿಯೋ ಕಾಲೇಜ್ ಶಿಕ್ಷಣಕ್ಕೆ ಮುಂಬೈ ಸೇರಿ ಅಲ್ಲಿ ಪದವೀಧರರಾದರು. ಆರ್ಕಿಟೆಕ್ಚರ್‌ನಲ್ಲಿ ತರಬೇತಿಪಡೆದರೂ ಅವರ ಒಲುವೆಲ್ಲಾ ಚಿತ್ರರಚನೆಯಲ್ಲಿ ಇದ್ದುದರಿಂದ ಚಿತ್ರಕಾರರಾಗಿ ಟೈಂಮ್ಸ್ ಆಫ್ ಇಂಡಿಯಾ ಸೇರಿ ಆರ್.ಕೆ.ಲಕ್ಷ್ಮಣ್ ಅವರ ನಿರ್ದೇಶನದಲ್ಲಿ ಕೆಲಸಮಾಡತೊಡಗಿದರು. 1974ರಲ್ಲಿ ಅಮೆರಿಕಾ ಸರ್ಕಾರದ ಆಹ್ವಾನದ ಮೇರೆಗೆ ಮಾರಿಯೋ ಅಮೆರಿಕೆಗೆ ತೆರಳಿ ಅಲ್ಲಿನ ಖ್ಯಾತ ವ್ಯಂಗ್ಯಚಿತ್ರಕಾರರಾದ ಚಾರ್ಲ್ಸ್ ಫುಲ್ಟ್ಜ್ ಮತ್ತು ಹೆರಿಬ್ಲಾಕ್ ಇವರುಗಳೊಂದಿಗೆ ತಮ್ಮ ಕಲೆಯನ್ನು ಹರಿತಗೊಳಿಸುವ ಅವಕಾಶ ಪಡೆದರು.

ಮಾರಿಯೋಗೆ 1988ರಲ್ಲಿ ಪದ್ಮಶ್ರೀ ಮತ್ತು 2002ರಲ್ಲಿ ಪದ್ಮಭೂಷಣ್ ಪ್ರಶಸ್ತಿಗಳು ಲಭಿಸಿದವು. 2012ರಲ್ಲಿ ಮರಣೋತ್ತರವಾಗಿ ಪದ್ಮವಿಭೂಷಣ್ ಪ್ರಶಸ್ತಿ ನೀಡಿ ಭಾರತ ಸರ್ಕಾರ ಅವರಿಗೆ ತನ್ನ ಗೌರವವನ್ನು ಸಲ್ಲಿಸಿತು. ಪೋರ್ಚುಗಲ್ ಸರ್ಕಾರವೂ ಸಹಾ ತನ್ನ ದೇಶದ ಅತ್ಯಂತ ಉನ್ನತ ಗೌರವವಾದ ಕ್ರಾಸ್ ಆಫ್ ದ ಆರ್ಡರ್ ಆಫ್ ಇಸಬೆಲ್ ಅನ್ನು 2009ರಲ್ಲಿ ಮಾರಿಯೋರವರಿಗೆ ನೀಡಿದ್ದು ನಿಜಕ್ಕೂ ಹೆಮ್ಮೆಯ ಸಂಗತಿ.

2011ರಲ್ಲಿ ತಮ್ಮ ಎಂಭತ್ತೈದನೆಯ ವಯಸ್ಸಿನಲ್ಲಿ ಮಾರಿಯೋ ಪಣಜಿಯ ಬಳಿ ಇರುವ ತಮ್ಮ ಸ್ವಗೃಹದಲ್ಲಿ ಕಾಲವಶರಾದರೂ ಅವರು ಸೃಷ್ಟಿಸಿದ ಪಾತ್ರಗಳಾದ ಮಿಸ್ ಫಾನ್ಸೆಕಾ, ಮಿಸ್ ನಿಂಬೂಪಾನಿ ಇವರುಗಳೆಲ್ಲಾ ಜನಮಾನಸದಲ್ಲಿ ಚಿರಸ್ಥಾಯಿಯಾಗಿರುವುದು ಖಂಡಿತ.


CARREIRA REGULAR
Mário de Miranda


CAFETERIA
MENU
RASAM
AMLET
M.










ಈಚೆಗೆ ತಲೆಯೆಲ್ಲಾ ಒಂದ್ ಥರಾ
ಭಾರ ಇರೋಹಾಗೆ ಅನ್ಸುತ್ತೆ ಡಾಕ್ಟರ್!


DAILY NOISE
WATER STILL SCARCE
JANES BOND

# ಓದುಗರ ಪತ್ರ

**-ರಾಘವೇಂದ್ರ ಭಟ್ಟ**

ಅಲ್ಲಾ, ಅದೇನು ಬಡ್ಕೊಂಡಿತ್ತೋ ಕಾಣೆ. ಈ ತಿಂಗ್ಳು ಅಪರಂಜಿನ ಹಾಗೆ ಒಂದೇ ಬೈಠಕ್ನಲ್ಲಿ ಓದೋದೇ!?

ಅದರಲ್ಲೂ, ಬಿಸಿಬಿಸಿಯಾಗಿ ಇವೊತ್ತಿನ ವಿದ್ಯಮಾನಕ್ಕೆ ಕನ್ನಡಿ ಹಿಡಿದ ಗಣೇಶ ಹೆಗ್ಗಡೆ ಅವರ ಬರಹದ ಕಡೇಲಿ ಕಾಳಿದಾಸನ ಕುಮಾರ ಸಂಭವ ಗ್ರಂಥದ ಪ್ರಸ್ತಾವದಲ್ಲಿ ಕೊಟ್ಟ 'ಟಾಂಗ್' ಅಂತೂ ಮುಟ್ಟಿಮುಟ್ಟಿ ನೋಡಿಕೊಳ್ತಾರೆ ಅಂತ ನನಗೇನೊ ಅನುಮಾನ ! ಗೋಣ್ಣೆಯೇ ಗೋಂದೆಂಬ ಇವಕ್ಕೆ ಅಂಟೋದೂ ಅನುಮಾನಾನೇ!

ಎಂದಿನಂತೆ, ಸಿ.ಆರ್. ಸತ್ಯರ ಬರಹದಲ್ಲಿ ನಮ್ಮ ಕನ್ನಡ ಲೇಖಕರ ದಯನೀಯ ಸ್ಥಿತಿಗೆ ರಾವುಗನ್ನಡಿ ಹಿಡಿದದ್ದು ಹೌದಲ್ಲಾ?

ಮುನ್ನುಡಿಗಿಂತ ಈಗೀಗ ಬೆನ್ನುಡಿ ಅಂಬೋ ಒಂದು ಹೊಸಾದನ್ನ ಹೊಸೆಯೋಕೆ ಪುಸ್ತಕದ ಅರಿಕೆ, ಮುನ್ನುಡಿ ಅನ್ನೋ ಬರಹಾನೇ ಸಾಕು ಅದಕ್ಕೆ ಬಾರ್ಡರ್ ಹಾಕಿದರಂತೂ ಕೇವಲ ಹತ್ತೇ ವಾಕ್ಯಗಳಲ್ಲಿ ಮುಗಿದೇ ಹೋಯ್ತು; ಬೆನ್ನುಡಿಕಾರರ ಪ್ರವರದ್ದೇ ನಾಲ್ಕಾರು ಸಾಲಿಗೆ ಸಮರ್ಪಿತ! ಇಂಥಾ ಪ್ರಕಾಶನ ಪ್ರಹಸನ ಪ್ರಶಸ್ತಿಗಳನ್ನ ಗುರಿ ಇಟ್ಕೊಂಡೇ ಜಾತಿ ಲಿಂಗ ಪಕ್ಷ ಇತ್ಯಾದಿ ಹೊಸೆದದ್ದೂ ಅಂತ ಯಾರಿಗೂ ಗೊತ್ತಾಗೋದೇ!

★★★

ಹಾ.ಮ್ಮೆ. ಸೂರಿ ಅವರ ಕಿರುಗತೆಯಲ್ಲಿ ಇಂದಿನ ಪೇಟೆ ಪೇಯಗಳ ಬೆರಕೆ ಸಮಾಚಾರ ಅಶೋಕ ಹೋಟೆಲ್ಲಿನ ಸಾಂಬಾರಿನ ಸಪ್ತಮರಸದ ರುಚಿಯನ್ನೇ ನೆನಪಿಸಿತು. ಹಳೆಕಾಲದ ಕೈಲಾಸಂ ಮಾನಸಪುತ್ರ ಮೊದ್ಮಣಿಯ 'ದಂರೋಟ್' ಅಂಬೋ ಸಿಹಿ ಅವೊತ್ತಿನವರೆಗೆ ಬಿಕರಿಯಾಗದೆ ಮಿಕ್ಕ ಸಿಹಿ ಖಾರಗಳ ಸಮ್ಮ್ ಮಿಶ್ರ ಉತ್ಪನ್ನ ಅಂತ ಎಲ್ಲೋ ಓದಿದ್ದೆ! ನಂರಾಜ್ಯದ ಸಂಮಿಶ್ರಾನೂ Something like this! ನಿವೇನಂತೀರಾ?

★★★

ಕಾಯಿಲೆಗಿಂತ ಕಹಿ ಅನ್ನಿಸಿದ ಕಪಾಯವನ್ನ ನ. ರತ್ನ ನಂ ಕಾರ್ಪೋರೇಟ್ ಆಸ್ಪತ್ರೆಗಳಲ್ಲಿ ಹೊಕ್ಕು ಕಬ್ಬಿನ ಹಾಲು ಮಷಿನ್ ನಿಂದ ಹೊರಕ್ ಬರೋ ತೊಗಟೆ ಥರಾ ಆಗೋ ಪೇಷಂಟ್‌ಗಳ ಗೋಳನ್ನ ಸೊಗಸಾಗಿ ಚಿತ್ರಿಸಿದೆ.

★★★

ಉತ್ತರ ಕರ್ನಾಟಕದ ಕನ್ನಡದ ಸೊಗಡನ್ನ ಗುಂಡೂರಾವ್ ದೇಸಾಯರ ಮಳೆ ಈಗ ಕಾಡ್ತಾ ಇರೋ ಮುಂಗಾರಿನ ಮುಂಗೋಪಕ್ಕೆ ಸಾಟಿ ಅನ್ನುತ್ತೆ.

ಒಟ್ಟಿನಲ್ಲಿ ಅಪರಂಜಿ ಅಂಬೋ ಚೂಡಾ ಪ್ರತಿ ತಿಂಗ್ಳೂ ಎರಡೆರಡ್ಸಲಾ ಬರ್ಬಾರ್ದೇ ಅನ್ನೋನಿಗೆ ಅದರ ವ್ಯಾವಹಾರಿಕ ಸಮಸ್ಯೆ ಪರಿಜ್ಞಾನ ಇಲ್ಲಾಂತ್ಲೇ ಭಾವಿಸ್ತೀರೇನೋ? ಅಲ್ವೇಮತ್ತೆ?

# ನಮ್ಮ ಚೀನಾ ಪ್ರವಾಸ

**ಡಾ. ಡಿ.ವಿ. ಗುರುಪ್ರಸಾದ್**

"ಏನ್ರೀ ಐವತ್ತು ದೇಶ ನೋಡಿದ್ದೀನಿ ಅಂತ ಎಲ್ಲರ ಮುಂದೆಯೂ ಬಡಾಯಿಕೊಚ್ಚೀರಾ? ನಮ್ಮ ಪಕ್ಕದ ದೇಶವಾದ ಚೀನಾಕ್ಕೆ ನೀವಿನ್ನೂ ಹೋಗಿಲ್ಲವಲ್ಲ"ಎಂದು ನನ್ನ ಶ್ರೀಮತಿ ಮೂದಲಿಸಿದಾಗ, "ನಾನು ಪೊಲೀಸ್ ಅಧಿಕಾರಿಯಾಗಿದ್ದ ಕಾರಣ ಆ ದೇಶಕ್ಕೆ ಹೋಗಲು ನನಗೆ ವೀಸಾ ಕೊಡದಿರಬಹುದು ಎಂಬ ಹೆದರಿಕೆಯಿದೆ"ಎಂದೆ.

"ನೀವು ನಿವೃತ್ತರಾಗಿಯೇ ಆರು ವರ್ಷ ಕಳೆದಿವೆ ಪ್ರಯತ್ನ ಮಾಡಿ ನೋಡೋಣ" ಎಂದಳು.

ನಾನು ನಮ್ಮ ಟ್ರಾವೆಲ್ ಏಜೆಂಟ್‌ಗೆ ಫೋನ್ ಮಾಡಿದೆ. ಆತ, "ಸರ್, ಚೀನಾ ವೀಸಾ ಬಗ್ಗೆ ಏನೂ ಹೇಳಲು ಬರುವುದಿಲ್ಲ. ಸಿಕ್ಕರೆ ಸಿಗುತ್ತದೆ, ಇಲ್ಲ ಎಂದರೆ ಇಲ್ಲ. ಅರ್ಜಿ ಹಾಕಿ ನೋಡಿ"ಎಂದ.

ನನ್ನ ಗೆಳೆಯನೊಬ್ಬ ವಾಕಿಂಗ್‌ನಲ್ಲಿ ಸಿಕ್ಕು, "ಗ್ರೂಪ್ ಟೂರ್‌ನಲ್ಲಿ ಮೂವತ್ತು ಜನರನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತಾರೆ. ಅವರ ಜತೆ ಹೋದರೆ ವೀಸಾ ಸಿಗುವುದು ಸುಲಭ. ಅಲ್ಲದೇ ನೀನು ಪುಳಿಚಾರು ತಿನ್ನುವ ಪ್ರಾಣಿ. ಅಲ್ಲಿಯ ಜನ ಎಲ್ಲ ಚಲಿಸುವ ವಸ್ತುಗಳನ್ನು ತಿಂದುಬಿಡುತ್ತಾರೆ. ಗ್ರೂಪ್ ಟೂರ್‌ನಲ್ಲಿ ನಮ್ಮ ಊಟ ಸಿಗುತ್ತದೆ"ಎಂದ.

ಅವನ ಸಲಹೆ ಸೂಕ್ತ ಎನಿಸಿತು. ಹಲವಾರು ಟ್ರಾವೆಲ್ ಏಜನ್ಸಿಗಳ ವೆಬ್‌ಸೈಟ್‌ಗಳನ್ನು ನೋಡಿ ಪ್ರತಿ ದಿನವೂ ಭಾರತೀಯ ಊಟವನ್ನೇ ಕೊಡುತ್ತೇವೆ ಎಂದು ಹೇಳಿದ್ದ ಟೂರ್ ಆಯ್ಕೆ ಮಾಡಿಕೊಂಡಾಗ "ಚೀನಾ ರೇಷ್ಮೆ ಬಟ್ಟೆಗೆ ಹೆಸರುವಾಸಿ. ಹಲವಾರು ರೇಷ್ಮೆ ಸೀರೆಗಳನ್ನು ಖರೀದಿಸಬಹುದು"ಎಂದು ಶ್ರೀಮತಿ ಸಂಭ್ರಮಿಸಿದಳು.

"ಚೀನಾದ ಒಂದು ಯುವಾನ್‌ಗೆ ನಮ್ಮ ಹನ್ನೊಂದು ರೂಪಾಯಿ. ನೀನು ತಿಳಿದಂತೆ ಕಡಿಮೆ ಬೆಲೆಗೆ ರೇಷ್ಮೆ ಸೀರೆ ಸಿಗುವುದಿಲ್ಲ"ಎಂದೆ.

"ಬೆಂಗಳೂರಿನ ಮೂಲೆ ಅಂಗಡಿಗಳಲ್ಲಿ ಚೀನಾ ಮಾಲು ಇಪ್ಪತ್ತು ಮೂವತ್ತು ರೂಪಾಯಿಗೆ ದೊರೆಯುವಾಗ, ಅದೇ ಊರಿನಲ್ಲಿಯೇ ಸಿಲ್ಕ್ ಸೀರೆ ಬೆಲೆ ಜಾಸ್ತಿ ಹೇಗಾಗುತ್ತದೆ"ಎಂದು ಬಾಯಿ ಮುಚ್ಚಿಸಿದಳು.

ವೀಸಾ ಸಿಕ್ಕ ಬಗ್ಗೆ ಮಾಹಿತಿ ಬಂದ ನಂತರ ಖುಷಿಯಿಂದ ಎಲ್ಲರಿಗೂ ತಿಳಿಸಿದೆ." ನೀನು ಬೀಗಬೇಕಾಗಿಲ್ಲ. ನಿನಗೆ ವೀಸಾ ಸಿಕ್ಕರೂ ಎಂಟ್ರಿ ಕೊಡದಿರಬಹುದು. ಕೊಟ್ಟರೂ ಏನಾದರೂ ಹೆಚ್ಚು ಕಡಿಮೆ ಆದರೆ ಒಳಗೆ ಹಾಕಬಹುದು. ಹುಷಾರಾಗಿರು, ಕ್ಷೇಮವಾಗಿ ವಾಪಸ್ ಬಾ"ಎಂದು ತಲೆಗೆ ಹುಳು ಬಿಟ್ಟ ಪಕ್ಕದ ಮನೆ ಸೀನ. "ಈಗಾಗಲೇ ದುಡ್ಡುಕೊಟ್ಟಾಗಿದೆ, ಕ್ಯಾನ್ಸಲ್ ಮಾಡಿದ್ರೆ ರೀಫಂಡ್ ಇಲ್ಲ ಎಂದೆ."

"ನಿನ್ನ ಹಣೆ ಬರಹ ಅನುಭವಿಸು" ಎಂದ.

ಮುಂದಿನ ತಿಂಗಳು ನಮ್ಮ ಗುಂಪಿನ ಜೊತೆ ಶಾಂಘಾಯ್‌ಗೆ ಹಾರಿಯೇ ಬಿಟ್ಟೆವು.

ವಿಮಾನ ನಿಲ್ದಾಣದಲ್ಲಿ ನೇರವಾಗಿ ಇಮಿಗ್ರೇಷನ್‌ಗೆ ಹೆಜ್ಜೆ ಹಾಕಿದಾಗ ಅಲ್ಲಿನ ಪೊಲೀಸ್ ಅಧಿಕಾರಿಗಳು ನಮ್ಮನ್ನು ಪಕ್ಕಕ್ಕೆ ಸರಿಸಿ ಗೋಡೆಗೆ ಜೋಡಿಸಿದ್ದ ಮಷೀನ್‌ಗಳ ಒಳಗೆ ಪಾಸ್‌ಪೋರ್ಟ್‌ನ್ನು ಹಾಕಿ ನಿಮ್ಮ ಕೈ ಬೆರಳು ಗುರುತುಗಳನ್ನು ಕೊಡಿ ಎಂದರು. ನನ್ನ ದುರಾದೃಷ್ಟ ಯಾವ ಮಷೀನ್‌ಗೆ ಪಾಸ್‌ಪೋರ್ಟ್ ಹಾಕಿದರೂ ನನ್ನ ಕೈ ಬೆರಳುಗಳ ಗುರುತು ರೆಕಾರ್ಡ್ ಆಗಲಿಲ್ಲ. ಗಾಭರಿ ಆಯಿತು. ಕಡೆಗೆ ಅಲ್ಲಿಯ ಪೊಲೀಸ್‌ನೊಬ್ಬನನ್ನು ಕರೆದೆ. ಅವನು ತನ್ನ ಕಛೇರಿಗೆ ಕರೆದುಕೊಂಡು ಹೋಗಿ ನನ್ನ ಪಾಸ್‌ಪೋರ್ಟ್‌ನ್ನು ಮೆಷಿನ್‌ನಲ್ಲಿ ಹಾಕಿ ಓಕೆ ಎನ್ನುವ ಚೀಟಿ ಕೊಟ್ಟ.

ನಂತರ ಎಲ್ಲರ ಜೊತೆ ಇಮಿಗ್ರೇಷನ್ ಸಾಲಿನಲ್ಲಿ ನಿಂತೆವು. ಬೇರೆ ದೇಶಗಳಲ್ಲಿ ಇಮಿಗ್ರೇಷನ್ ಮಾಡುವಾಗ ನನ್ನ ಹೆಂಡತಿಯ ಜತೆಗೇ ಹೋಗಿ ಪಾಸ್‌ಪೋರ್ಟ್ ಕೊಡುವ ಅಭ್ಯಾಸ. ಅದೇ ರೀತಿಯೇ ಒಟ್ಟಿಗೆ ಹೋದಾಗ, "ನೀವೊಬ್ಬರೇಬನ್ನಿ" ಎಂದು ಅಲ್ಲಿದ್ದ ಹೆಣ್ಣು ಮಗಳು ಗಡಸು ಧನಿಯಲ್ಲಿ ಹೇಳಿದಳು. ನನ್ನ ಪತ್ನಿ ಇನ್ನೊಂದು ಕ್ಯೂನಲ್ಲಿ ನಿಂತಳು. ಮುಂದಿರುವ ಮಷಿನ್‌ನಲ್ಲಿ ನಿಮ್ಮ ಕೈಬೆರಳು ಗುರುತು ಕೊಡಿ ಎಂದಳು ಚೀನೀ ಅಧಿಕಾರಿಣಿ. ನಾನು ಈಗಾಗಲೇ ಕೊಟ್ಟಿದ್ದೆನಲ್ಲಾ ಎಂದು ಕೈಯಲ್ಲಿದ್ದ ಒ.ಕೆ. ಚೀಟಿ ಕೊಟ್ಟೆ. ದುರದುರನೆ ನೋಡಿದಳು.

ಏನೋ ಎಡವಟ್ಟಾಗಿದೆ ಎಂದುಕೊಂಡು ಮತ್ತೊಮ್ಮೆ ಬೆರಳು ಗುರುತುಗಳನ್ನು ಕೊಟ್ಟೆ. ನನ್ನ ಪಾಸ್‌ಪೋರ್ಟ್ ಅನ್ನು ನೋಡಿ ನನ್ನ ಮುಖವನ್ನೊಮ್ಮೆ ನೋಡಿದಳು. ನಿಮ್ಮ ತಲೆಯ ಮೇಲಿರುವ ಟೋಪಿಯನ್ನು ತೆಗೆಯಿರಿ ಎಂದಳು. ತೆಗೆದೆ. ಕನ್ನಡಕ ತೆಗೆಯಿರಿ ಎಂದಳು. ತೆಗೆದೆ. ಬಟ್ಟೆ ತೆಗೆಯಿರಿ ಎನ್ನಲಿಲ್ಲ. ಎದುರಿನ ಕ್ಯಾಮರ ನೋಡಿ ಎಂದಳು. ಸೆಲ್ಫಿಗೆ ಕೊಡುವ ಪೋಸ್ ಕೊಟ್ಟು ಮುಗುಳ್ನಕ್ಕೆ. "ಡೋಂಟ್‌ಸ್ಮೈಲ್" ಎಂದಳು. ಚೀನಾದಲ್ಲಿ ನಿಮ್ಮ ಅಡ್ರಸ್? ಎಂದಳು. ನಮ್ಮ ಟೂರ್‌ನಲ್ಲಿ ಬಂದಿದ್ದವರ ಎಲ್ಲರ ಇಮಿಗ್ರೇಷನ್ ಮುಗಿದು ಎಲ್ಲರೂ ಮುಂದೆ ಹೋಗಿದ್ದರು. ಹೋಟೆಲ್ ಹೆಸರು ಮರೆತಿದೆ ಎಂದೆ. ಸ್ವಲ್ಪ ಹೊತ್ತು ಸುಮ್ಮನಿದ್ದು "ನಿಮ್ಮ ಹೆಸರೇನು" ಎಂದಳು. ಹೆಸರು ಹೇಳಿದೆ. ಏನೋ ಹೇಳಲು ಹೊರಟವಳು ಏನೂ ತೋಚದೆ ಸೀಲ್ ಹಾಕಿ ಕಳುಹಿಸಿದಳು. ಬದುಕಿದೆಯಾ ಬಡಜೀವವೇ ಎಂದುಕೊಂಡು ಮುಂದೆ ಹೋದೆ. ನಮ್ಮ ಗುಂಪಿನವರು ಗಾಭರಿಯಾಗಿ ನನಗಾಗಿ ಕಾಯುತ್ತಿದ್ದರು. ಚೀನಾಕ್ಕೆ ಎಂಟ್ರಿ ಸಿಗುವುದೇ ಇಷ್ಟು ಕಠಿಣವಾದರೆ ವಾಪಸಾಗುವುದು ಹೇಗೆ ಎಂಬ ಭಯ ಆಯಿತು.

"ಚೀನಾದಿಂದ ಎಕ್ಸಿಟ್ ಆಗುವುದೂ ಸುಲಭವಲ್ಲ. ಯಾವಾಗ ಬೇಕಾದರೂ ಯಾರನ್ನಾದರೂ ಒಳಗೆ ಹಾಕಬಹುದು"ಎಂದು ಸೀನ ಹೇಳಿದ ಮಾತು ತಲೆಯಲ್ಲಿ ಗುನುಗುನಿಸತೊಡಗಿದವು.

ವಿಮಾನ ನಿಲ್ದಾಣ ಬಿಟ್ಟು ಹೊಟೇಲ್ ತಲುಪಿದಾಗ ನಮ್ಮ ಗೈಡ್, "ನಿಮ್ಮ ಪಾಸ್‌ಪೋರ್ಟ್‌ಗಳನ್ನು ಹೊಟೇಲ್‌ನಲ್ಲಿ ಡಿಪಾಸಿಟ್ ಮಾಡಬೇಕು"

ಎಂದ. ನನಗೆ ಹೆದರಿಕೆಯಾಯಿತು. "ಪಾಸ್‌ಪೋರ್ಟ್ ಇದ್ದರೆ ಮಾತ್ರ ಚೀನಾ ಬಿಟ್ಟು ನಮ್ಮ ದೇಶಕ್ಕೆ ವಾಪಸ್ ಬರಲು ಸಾಧ್ಯ. ಪಾಸ್‌ಪೋರ್ಟ್‌ನ್ನೇ ತೆಗೆದುಕೊಂಡುಬಿಟ್ಟರಲ್ಲಾ ಏನು ಮಾಡುವುದು" ಎಂದೆ. "ಹೊಟೇಲ್ ಖಾಲಿ ಮಾಡುವಾಗ ಪಾಸ್‌ಪೋರ್ಟ್ ವಾಪಸ್ ಕೊಡುತ್ತಾರೆ" ಎಂದ ಗೈಡ್.

ನಾವು ಹೋದ ಕಡೆಯಲ್ಲೆಲ್ಲಾ ಪೊಲೀಸರು ಕಾಣದಿದ್ದರೂ ಮೂಲೆಮೂಲೆಗಳಲ್ಲಿ ಸಿಸಿಟಿವಿ ಕ್ಯಾಮರಾ ಇದ್ದುದ್ದರಿಂದ ನಮ್ಮ ಪ್ರತಿಯೊಂದು ಚಲನವಲನಗಳನ್ನು ಯಾರೋ ಗಮನಿಸುತ್ತಿದ್ದಾರೆ ಎಂದೇ ಭಾಸವಾಗುತ್ತಿತ್ತು. ಶಾಂಘಾಯ್ ಭೇಟಿ ಮುಗಿಸಿ ಇನ್ನೊಂದು ಊರಿಗೆ ವಿಮಾನದ ಮೂಲಕ ಪ್ರಯಾಣಿಸಬೇಕಾಗಿತ್ತು. ವಿಮಾನ ನಿಲ್ದಾಣದ ಹೊರಗಡೆಯೆ ನಮ್ಮ ಸೂಟ್‌ಕೇಸ್‌ನ್ನು ಎಕ್ಸರೇ ಮೂಲಕ ಪರೀಕ್ಷಿಸಿದರು. ನಾನು ಮುಂದೆ ಹೊರಟಾಗ ಅಲ್ಲಿದ್ದ ಕೆಲ ಪೊಲೀಸರು ನನ್ನನ್ನು ತಡೆದರು. ಗಾಭರಿಯಾಗಿ ಏತಕ್ಕೆ ನಮ್ಮನ್ನು ತಡೆದಿರಿ ಎಂದು ಕೇಳಿದೆ. ಅವರಿಗೋ ಇಂಗ್ಲೀಷ್ ಬರುವುದಿಲ್ಲ. ನಮಗೆ ಅವರ ಭಾಷೆ ಬರುವುದಿಲ್ಲ. ನೀವೇನೂ ಮಾತನಾಡಬೇಡಿ ಎಂದು ನಮ್ಮ ಗೈಡ್ ಸನ್ನೆ ಮಾಡಿದ. ಐದು ನಿಮಿಷದ ತರುವಾಯು ಮುಂದೆ ಹೋಗಿ ಎಂದ. ವಿಚಿತ್ರ ಎನಿಸಿತು.

ಚೆಕ್‌ಇನ್ ಕೌಂಟರ್‌ಗೆ ಹೋದಾಗ ನನ್ನ ಟಿಕೆಟ್ ಹಾಗೂ ಪಾಸ್‌ಪೋರ್ಟ್ ನೋಡಿ ನಿಮಗೆ ಬೋರ್ಡಿಂಗ್ ಪಾಸ್ ಕೊಡಲು ಬರುವುದಿಲ್ಲ ಎಂದರು. ಏಕೆ ಎಂದು ಕೇಳಿದೆ. "ಪಾಸ್‌ಪೋರ್ಟ್‌ನಲ್ಲಿ ನಿಮ್ಮ ಹೆಸರು ದೇವರಾಯನದುರ್ಗ ವೆಂಕಟೇಶ್‌ಮೂರ್ತಿ ಗುರುಪ್ರಸಾದ್ ಎಂದಿದೆ. ಟಿಕೆಟ್‌ನಲ್ಲಿ ಡಿ.ವಿ. ಮೂರ್ತಿ ಗುರುಪ್ರಸಾದ್ ಎಂದಿದೆ ಎಂದ." ನನ್ನ ಉದ್ದನೆಯ ಹೆಸರನ್ನು ಕಂಪ್ಯೂಟರ್ ಕತ್ತರಿಸಿದೆ ಎಂದರೂ ನಿಮಗೆ ಬೋರ್ಡಿಂಗ್ ಪಾಸ್ ಕೊಡಲು ಆಗುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದ. ಬೆವರು ಸುರಿಯತೊಡಗಿತು. ನನ್ನ ಹೆಂಡತಿಗೇನೋ ಬೋರ್ಡಿಂಗ್ ಪಾಸ್ ಸಿಕ್ಕತು.

ನಮ್ಮ ಚೀನೀ ಗೈಡ್‌ನ ಸಹಾಯದಿಂದ ವಿಮಾನ ಸಂಸ್ಥೆಯ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಬೋರ್ಡಿಂಗ್‌ಕಾರ್ಡ್ ಪಡೆದೆ. "ಬೋರ್ಡಿಂಗ್‌ಕಾರ್ಡ್ ನಾವು ಕೊಟ್ಟಿದ್ದೇವೆ. ಆದರೆ ನೀವು ವಿಮಾನ ನಿಲ್ದಾಣದ ಒಳಗೆ ಹೋಗಬೇಕಾದರೆ ಸೆಕ್ಯೂರಿಟಿ ಅಧಿಕಾರಿಗಳು ಒಪ್ಪಬೇಕು" ಎಂದರು. ಅಲ್ಲಿಯ ಸೆಕ್ಯುರಿಟಿ ಬಹಳ ಟೈಟ್. ಪಾಸ್‌ಪೋರ್ಟ್‌ನ ಫೊಟೊ ಅಲ್ಲಿನ ಕ್ಯಾಮೆರಾದಲ್ಲಿ ತೆಗೆದ ಫೊಟೊಗೆ ಹೊಂದಾಣಿಕೆ ಆದ ನಂತರ ನನ್ನ ಬೋರ್ಡಿಂಗ್ ಪಾಸ್ ನೋಡಿ ಹೆಸರು ಹೊಂದಾಣಿಕೆ ಆಗುತ್ತಿಲ್ಲ ಎಂದು ಒಳಗೆ ಬಿಡಲಿಲ್ಲ. ನಮ್ಮ ದೇಶಕ್ಕೆ ಮರಳುವ ಹಾಗೆಯೇ ಇಲ್ಲವಲ್ಲ. ಯಾತಕ್ಕಾದರೂ ಇಲ್ಲಿಗೆ ಬಂದೆನೋ ಎಂದು ನನ್ನನ್ನು ನಾನೇ ಶಪಿಸಿಕೊಂಡೆ. ಅಷ್ಟರಲ್ಲಿ ವಿಮಾನ ಸಂಸ್ಥೆ ಅಧಿಕಾರಿ ಬಂದು ಇವರೇ ಅವರು ಎಂದು ಸೆಕ್ಯೂರಿಟಿಯವರಿಗೆ ಮನದಟ್ಟು ಮಾಡಿಕೊಟ್ಟ ನಂತರ ಮುಂದಿನ ಜಾಗಕ್ಕೆ ಪ್ರಯಾಣ ಮಾಡಿದೆವು.

ಗುಲ್ಲಿನ್ ವಿಮಾನ ನಿಲ್ದಾಣದಿಂದ ಬೀಜಿಂಗ್‌ಗೆ ಹೋಗುವಾಗಲೂ ಅದೇ ತೊಂದರೆ ಆಯಿತು. ಮತ್ತೆ ಅದೇ ರೀತಿ ವಿಮಾನ ಸಂಸ್ಥೆಯಿಂದ ನಾನೇ ಪಾಸ್‌ಪೋರ್ಟ್‌ನಲ್ಲಿರುವ ವ್ಯಕ್ತಿ. ಹೆಸರನ್ನು ಸಣ್ಣದಾಗಿ ಮಾಡಲಾಗಿದೆ ಎಂದು ಮನದಟ್ಟು ಮಾಡಿಕೊಟ್ಟ ನಂತರ ಅಲ್ಲಿ ಸೆಕ್ಯೂರಿಟಿಗಾರ್ಡ್ ನಿಮ್ಮನ್ನು ಒಳಗೆ ಬಿಡಲು ನನಗೆ ಅಧಿಕಾರವಿಲ್ಲ. ನಮ್ಮ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ

ಎಂದುಬಿಟ್ಟಳು. "ರೀ, ನೀವು ಭಾರತದಲ್ಲಿ ಏರ್‌ಪೋರ್ಟ್ ಸೆಕ್ಯೂರಿಟಿ ಮಾಡುವ ಸಿಐಎಸ್‌ಎಫ್‌ನಲ್ಲಿ ಕೆಲಸ ಮಾಡಿದ್ದೀನಿ ಎಂದು ಹೇಳಿ" ಎಂದಳು ನನ್ನ ಹೆಂಡತಿ.

"ಸುಮ್ಮನಿರು ನೀನು. ನಾನು ಪೋಲೀಸ್ ಇಲಾಖೆಯಲ್ಲಿ ಇದ್ದೆ ಎಂದು ಹೇಳಿದರೆ ಇಲ್ಲಿಂದ ಹೊರಹೋಗಲು ಬಿಡುವುದೇ ಇಲ್ಲ"ಎಂದು ನಾನು ಅವಳಿಗೆ ಗದರಿದೆ. ನಮ್ಮ ಗುಂಪಿನ ಕೆಲವರು ವಿನಂತಿಸಿದ ನಂತರ ಹಿರಿಯ ಅಧಿಕಾರಿ ನನ್ನನ್ನು ಒಳಗೆ ಹೋಗಲು ಬಿಟ್ಟ.

ಅಲ್ಲಿಂದ ಬೀಜಿಂಗ್ ತಲುಪಿದೆವು. ಟಿಯಾನಾನ್ಮೆನ್ ಚೌಕ ನೋಡಲು ಹೋದೆವು. ಜನರ ಜಾತ್ರೆಯೇ ನೆರೆದಿತ್ತು. ಇಷ್ಟು ಜನರನ್ನು ಹೇಗೆ ಕಂಟ್ರೋಲ್ ಮಾಡುತ್ತಾರೆ ಎಂದು ಕೇಳಿದಾಗ, "ನಿಮ್ಮೆಲ್ಲರ ಪಾಸ್ ಪೋರ್ಟ ವಿವರಗಳನ್ನು ಟಿಕೆಟ್ ಪಡೆಯುವಾಗ ಪೋಲಿಸರಿಗೆ ಕೊಡಲಾಗಿದೆ. ಏನೇ ತೊಂದರೆಯಾದರೂ ಬೇಗನೇ ಪತ್ತೆ ಮಾಡುತ್ತಾರೆ ಹುಷಾರಾಗಿರಿ ಎಂದ ಗೈಡ್. ಆ ದೇಶದ ಭದ್ರತಾ ವ್ಯವಸ್ಥೆಯ ಬಗ್ಗೆ ಅಚ್ಚರಿ ಮೂಡಿತು. ಭಯವೂ ಮೂಡಿತು

ಮತ್ತೆ ಬೀಜಿಂಗ್‌ನಿಂದ ಕ್ಷಿಯಾನ್ ಎನ್ನುವ ಊರಿಗೆ ಹೋಗಬೇಕಾದಾಗ ಚೀನಾ ದೇಶದ ನಮ್ಮ ಗೈಡ್‌ಗೆ ನನ್ನ ಪರಿಸ್ಥಿತಿಯನ್ನು ಮೊದಲೇ ಮನದಟ್ಟು ಮಾಡಿಕೊಟ್ಟೆ. "ನೀವು ಏನೂ ಹೆದರಬೇಡಿ, ನಾನು ಈ ಹಿಂದೆ ಗಗನಸಖಿಯಾಗಿದ್ದೆ, ನಿಮಗೆ ನಾನು ಸಹಾಯ ಮಾಡುತ್ತೇನೆ"ಎಂದು ಅವಳು ಹೇಳಿದಳು. ಆದರೂ ಅದೇ ಪರಿಸ್ಥಿತಿಯನ್ನು ಅನುಭವಿಸಬೇಕಾಯಿತು.

ನನ್ನ ಹೆಂಡತಿ, "ಪಾಸ್‌ಪೋರ್ಟ್‌ನಲ್ಲಿ ಇಂತಹ ದೊಡ್ಡ ಹೆಸರನ್ನಿಟ್ಟುಕೊಂಡು ಎಂತಹ ಪಜೀತಿ ಬಂದಿತು. ನೋಡಿ"ಎಂದಳು.

"ನಿನ್ನ ಮಾತು ಕೇಳಿ ಚೀನಾಕ್ಕೆ ಬಂದಿದ್ದರಿಂದಲೇ ಪಜೀತಿಯಾಯಿತು. ಬೇರೆ ಎಲ್ಲಿಯೂ ಹೀಗೆ ಆಗಿರಲಿಲ್ಲವಲ್ಲಾ" ಎಂದು ಗದರಿದೆ.

ನೀವು ಯಾಕೆ ಇಷ್ಟು ಉದ್ದನೆಯ ಹೆಸರನ್ನು ಇಟ್ಟುಕೊಂಡಿರಿ? ಡಿ.ವಿ.ಗುರುಪ್ರಸಾದ್ ಎಂದು ಪಾಸ್‌ಪೋರ್ಟ್‌ನಲ್ಲಿ ಬರೆಸಲು ಬರುತ್ತಿರಲಿಲ್ಲವೇ. ಭಾರತಕ್ಕೆ ಹೋದ ತಕ್ಷಣ ಪಾಸ್‌ಪೋರ್ಟ್‌ನಲ್ಲಿನ ಹೆಸರು ಬದಲಾಯಿಸಿ" ಎಂದಳು.

"ಹೆಸರು ಬದಲಾಯಿಸುವ ವಯಸ್ಸು ಮುಗಿದಿದೆ." ಎಂದೆ.

ಕಡೆಗೂ ಆ ಚೀನೀ ಹೆಣ್ಣು ಮಗಳು ಹಾಗೂ ಹೀಗೂ ಮಾಡಿ ನನ್ನನ್ನು ಸೆಕ್ಯೂರಿಟಿಯಿಂದ ಮುಂದಕ್ಕೆ ಕಳುಹಿಸಿದಳು. ಇಮಿಗ್ರೇಷನ್‌ನಲ್ಲಿ ಏನೂ ತೊಂದರೆ ಆಗಲಿಲ್ಲ. ಬೆಂಗಳೂರಿಗೆ ಹೋಗುವ ವಿಮಾನ ಏರಿದಾಗ ಇನ್ನು ಮುಂದೆ ಚೀನಾದ ಸಹವಾಸವೇ ಬೇಡ ಎನಿಸಿ ಪ್ರವಾಸದ ಮಜವೇ ಮಾಯವಾಯಿತು

**ಲೇಖಕರಲ್ಲಿ ವಿನಂತಿ**

**ತಾವು ಅಪರಂಜಿಗೆ ಕಳುಹಿಸುವ ಲೇಖನಗಳನ್ನು ದಯಮಾಡಿ 'ನುಡಿ ತತ್ರಾಂಶ'ದಲ್ಲಿ ಅಚ್ಚಿಸಿ ಕಳಿಸಿದರೆ ನಮಗೆ ಬಹಳ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರವನ್ನು ಕೋರುತ್ತೇವೆ.**

# ಸುಮ್ನೆ ಟೈಂ ಪಾಸ್

– ಬೇಲೂರು ರಾಮಮೂರ್ತಿ

ಸುಮ್ನೆ ಟೈಂ ಪಾಸ್ ಮಾಡೋದು ಕೆಲವರ ಸ್ವಭಾವ. ಅದರಲ್ಲೂ ಸಣ್ಣ ಪುಟ್ಟ ಹಳ್ಳಿಗಳಲ್ಲಿ ಇದು ಸಾಮಾನ್ಯ. ಮನೆಯಲ್ಲಿ ತಿಂಡಿ ತಿಂದು ಒಂದು ಸುತ್ತು ಅಂತ ಹೊರಟರೆ ಅಂಗಡಿ ಕಟ್ಟೆಯಲ್ಲೋ ದೇವಸ್ಥಾನದ ಕಟ್ಟೆಯಲ್ಲೋ ಕೂತು ಹೋಗೋ ಬರೋರನ್ನು ಕರೆದು ಮಾತಾಡಿಸಿ ಇಲ್ಲ ಸಲ್ಲದ ಸಲಹೆಗಳನ್ನು ಕೊಡುತ್ತಾ ಟೈಂ ಪಾಸ್ ಮಾಡುತ್ತಾರೆ. ನಮ್ಮ ಸೋಮು ಹಳ್ಳೀಲಿ ಬೆಳೆದವನಲ್ಲವಾದರೂ ಅದು ಹೇಗೋ ಈ ಟೈಂ ಪಾಸ್ ಬುದ್ದಿ ಅವನಿಗೆ ಅಂಟಿಕೊಂಡು ಬಿಡ್ತು. ಆಫೀಸ್ ಕೆಲಸದಲ್ಲಿ ಮಗ್ನನಾಗಿರುವಾಗ ಟೈಂ ಪಾಸ್ ಮಾಡೋಕೆ ಆಗಲ್ಲ. ಊಟದ ಬಿಡುವಿನಲ್ಲಿ, ಸಾಹೇಬರು ಮೀಟಿಂಗಿಗೆ ಅಂತ ಹೊರಗೆ ಹೋದಾಗ ಅವನು ಹೀಗೆ ಟೈಂ ಪಾಸ್ ಮಾಡೋದುಂಟು. ಅದರಲ್ಲೂ ಆಫೀಸಿನ ಸಹೋದ್ಯೋಗಿಗಳನ್ನು ಗೋಳು ಹುಯ್ದುಕೊಂಡು ಟೈಂ ಪಾಸ್ ಮಾಡೋದು ಸೋಮುಗೆ ಎಲ್ಲಿಲ್ಲದ ಸುಖ ತಂದುಕೊಡುತ್ತೆ. ಹೀಗೇ ಒಂದು ದಿನ ಅವನು ಟೈಂ ಪಾಸ್ ಮಾಡೋ ಬುದ್ಧಿಯಿಂದ ರೀ ಜಾನಕೀ ನಾನು ನೆನ್ನೆ ಮಾರ್ಕೆಟ್ ಬೀದೀಲಿ ಹೋಗ್ತಿದ್ದೆ. ಅಲ್ಲಿ ಒಂದು ಸೇಲ್ ಹಾಕಿದ್ದಾರೆ ರೀ. ಎಂಥೆಂಥಾ ರೇಷ್ಮೆ ಸೀರೆಗಳು ಅಂತೀರಿ, ನನಗೇ ಅಷ್ಟೊಂದು ಆಸೆ ಆಯ್ತು ಅಂದ್ರೆ ಇನ್ನು ನಿಮ್ಮಂಥವರ ಗತಿ ಏನ್ರೀ. ನನಗೆ ಮದುವೆ ಆಗಿಲ್ದೇ ಇದ್ರೆ ನಿಮ್ಮನ್ನೇ ಕರೆದುಕೊಂಡು ಹೋಗಿ ಒಂದೈವತ್ತು ಸೀರೆ ಕೊಡಿಸಿಬಿಡ್ತಿದ್ದೆ ಅಂದ. ಪಕ್ಕದಲ್ಲಿ ಕೂತಿದ್ದ ರಾಘು ಸೋಮು ಸೊಂಟ ಚಿವುಟಿ ಲೇ, ನಿಮಗೆ ಮದುವೆ ಆಗಿಲ್ದೇ ಇದ್ರೆ ಅನ್ನು. ಜಾನಕಿಗೆ ಮದುವೆ ಆಗಿ ಗಂಡ ಬಿಟ್ಟು ಹೋಗಿದಾನೆ ಅನ್ನೋದು ನಿನಗೆ ಗೊತ್ತಿಲ್ವಾ ಅಂದ. ಸೋಮು ತುಟಿ ಕಚ್ಚಿಕೊಂಡ. ಸರಿ ಜಾನಕೀ ಕಿವಿಗೆ ಹುಳ ಬಿಟ್ಟ ಹಾಗಾಯ್ತು ಅಂದ್ಕೊಂಡು ತನ್ನ ಕೆಲಸದಲ್ಲಿದ್ದ. ಜಾನಕೀ ಗಂಡ ಐದು ವರ್ಷದ ಹಿಂದೆ ಯಾವುದೋ ಕಾರಣಕ್ಕೆ ಮನೆ ಬಿಟ್ಟು ಹೋದೋರು ಎಲ್ಲಿದಾರೆ ಅನ್ನೋದೇ ಗೊತ್ತಿರಲಿಲ್ಲ. ಹುಡುಕಿ, ಪೋಲೀಸಿಗೆ ಕಂಪ್ಲೇಂಟ್ ಕೊಟ್ಟು ಸಾಕಾಗಿ ಅವನೇ ಹಿಂದಕ್ಕೆ ಬಂದರೆ ಬರಲಿ ಅಂತ ಸುಮ್ಮನಾಗಿದ್ದರು. ಇದೇ ಯೋಚನೇಲಿ ಜಾನಕಿ ಮುಳುಗಿದ್ದಳು. ಆಫೀಸಿನ ಎಲ್ಲರೂ ಸೋಮು ಬಿಟ್ಟ ಹುಳುಗೆ ಜಾನಕಿ ಏನು ಮಾಡ್ತಾಳೆ ಅಂತ ಗಮನಿಸುತ್ತಿದ್ದರು. ಊಟ ಆದ ಮೇಲೆ ಜಾನಕಿ ಸಾಹೇಬರ ಅನುಮತಿ ಪಡೆದು ಸೀರೆ ನೋಡ್ಕೊಂಡು ಬರೋಕೆ ಹೊರಟೇಬಿಟ್ಟಳು. ಆದರೆ ಸಾಹೇಬರಿಗೆ ಹೇಳಿದ್ದು ನಮ್ಮಜ್ಜಿಗೆ ಹುಷಾರಿಲ್ಲ ನೋಡ್ಕೊಂಡು ಬೇಗ ಬಂದುಬಿಡ್ತೀನಿ ಅಂತ. ಚೋಟಾಳಿಗೆ ಒಂದು ಮೋಟಾಳು ಅನ್ನೋ ಹಾಗೆ ಜಾನಕಿ ಜೊತೆಗೆ ರಾಧನೂ ಹೋದಳು.

ಅವರಿಬ್ಬರೂ ಆ ಕಡೆ ಹೋದ ಮೇಲೆ ಸೋಮು ಜೋರಾಗಿ ನಕ್ಕಿದ್ದೂ ನಕ್ಕಿದ್ದೇ. ಯಾಕೋ ಅಂತ ಕೇಳಿದ್ರೆ ಅದ್ಯಾರೋ ಹೇಳಿದ್ರು ಸೀರೆ ಅಂದರೆ ಹೆಂಗಸರು ಎದ್ದೂ ಬಿದ್ದೂ ಓಡ್ತಾರೆ ಅಂತ. ಅದು ಇವತ್ತು ನಿಜ ಆಯ್ತು ಬಿಡು ಅಂದ. ರುಕ್ಮಿಣಿ ನೋಡಿ ಸೋಮು ಸರ್, ನನ್ನನ್ನೂ ಕರೆದಿದ್ರೆ ನಾನೂ ಹೋಗ್ತಿದ್ದೆ. ಆದರೆ ಜಾನಕಿ ರಾಧ ಇಬ್ಬರೇ ಹೊರಟು ಹೋದ್ರು ಅಂದಳು. ಸೋಮು

ಹೋಗ್ಲಿ ಬಿಡ್ರೀ, ಅವರು ಹೀಗೆ ಹೋಗಿ ಹಾಗೆ ವಾಪಸ್ ಬರ್‍ತಾರೆ ಅಂದ. ಯಾಕೆ ಸರ್ ಅಂತ ಕೇಳಿದ್ರೆ ಅಲ್ಲಿ ರೇಷ್ಮೆ ಸೀರೆನೂ ಇಲ್ಲ ಏನೂ ಇಲ್ಲ. ನಾನು ಸುಮ್ನೆ ಟೈಂ ಪಾಸ್‌ಗೆ ಮಾರ್ಕೆಟ್ ಬೀದೀಲಿ ಯಾವ ಸೇಲೂ ಇಲ್ಲ. ಅಸಲಿಗೆ ಅಲ್ಲಿ ರೇಷ್ಮೆ ಸೀರೆ ಅಂಗಡಿಗಳೇ ಇಲ್ಲ. ಅಲ್ರೀ ಹೋದೋರು ಹೋದರು ಸರಿಯಾದ ಅಡ್ರೆಸ್ ಕೇಳಿಕೊಂಡು ಹೋಗಬಾರದಾ. ನೋಡ್ತಾ ಇರಿ ನನ್ನ ಟೈಂ ಪಾಸ್ ಏನು ಪರಿಣಾಮ ಬೀರುತ್ತೆ ಅಂದು ಗಹಗಹಿಸಿದ. ಅಲ್ಲ ಸರ್. ಸೇಲ್ ಇಲ್ದಿದ್ರೂ ಸುಳ್ಳು ಹೇಳೀ ಜಾನಕೀನ ಹೊರಗೆ ಹೋಗೋ ಹಾಗೆ ಮಾಡಿದ್ರಿ ಅಂತ ಗೊತ್ತಾದ್ರೆ ಸಾಹೇಬರು ನಿಮ್ಮನ್ನು ತರಾಟೆಗೆ ತಗೊಳಲ್ವ ಅಂದಳು ರುಕ್ಮಿಣಿ. ಅದು ಹ್ಯಾಗ್ರೀ ತರಾಟೆಗೆ ತಗೋತಾರೆ. ಹಾಗೇನಾದರೂ ತಗೊಂಡ್ರೆ ನಾಳೆ ಅವರಿಗೂ ಇಂಥದೇ ಏನಾದರೂ ಹೇಳಿ ಟೈಂ ಪಾಸ್ ಮಾಡ್ತೀನಿ ಅಂದ. ಈಗೊಂದು ತಿಂಗಳ ಕೆಳಗೆ ಸಾಹೇಬರ ಕೋಣೆಗೆ ಹೋಗಿ ಸರ್ ನಿಮ್ಮ ಮನೆಯವರು ಫೋನ್ ಮಾಡಿದ್ರು ಅವರು ಕೆನರಾ ಬ್ಯಾಂಕ್ ಬಳಿ ನಿಮಗೆ ಕಾಯ್ತಿದಾರಂತೆ ಹೋಗಬೇಕಂತೆ. ಅಂದ. ಸಾಹೇಬರು ಓಡಿದರು. ಹೋಗಿ ಹಾಗೆ ಹಿಂದಕ್ಕೆ ಬಂದು ರೀ ಸೋಮು ನಮ್ಮನೆಯವರು ಅಲ್ಲಿ ಇರಲೇ ಇಲ್ವಲ್ರೀ, ನಿಮಗೆ ಯಾರ್‍ರೀ ಫೋನ್ ಮಾಡಿದ್ದು ಅಂತ ಕೇಳಿದ್ರೆ ಸರ್, ಧ್ವನಿ ನಿಮ್ಮನೆಯವರದ್ದೇ ಇದ್ದ ಹಾಗಿತ್ತು. ಯಾರು ಮಾತಾಡೋದು ಅಂತ ಕೇಳಿದ್ರೆ ಅವರಿಗೆ ಕೋಪ ಬರುತ್ತೆ ಅಂತ ಸರಿ ಮೇಡಂ ಕಳಿಸ್ತೀನಿ ಅಂದೆ. ರೀ ನಾನು ನನ್ನ ಹೆಂಡ್ತಿಗೆ ಮೊಬೈಲ್ ಮಾಡಿದೆ ಅವಳು ನಾನು ಫೋನ್ ಮಾಡಿರಲೇ ಇಲ್ಲ ಅಂತಾಳೆ ಅಂದು ರೇಗಿದರು. ಸಾಹೇಬರು ಕೋಣೆಗೆ ಹೋದ ಮೇಲೆ ಸೋಮು ಸಹೋದ್ಯೋಗಿಗಳ ಕಡೆ ನೋಡಿ ನಕ್ಕು ನೋಡಿದ್ರಾ ನನ್ನ ಟೈಂ ಪಾಸ್ ಅಂದ. ಜಾನಕಿ ಹಿಂದಕ್ಕೆ ಬಂದು ಸೋಮುನ ತರಾಟೆಗೆ ತಗೋಳೋದನ್ನೇ ಕಾಯುತ್ತಿದ್ದರು ಎಲ್ಲರೂ. ಸೋಮು ಮಾತ್ರ ಒಳಗೊಳಗೇ ಸಂತಸದಲ್ಲಿದ್ದ. ಸುಮಾರು ಮೂರು ಗಂಟೆಯ ಹೊತ್ತಿಗೆ ರಾಧ ಒಬ್ಬಳೇ ವಾಪಸ್ ಬಂದಳು. ಎಲ್ರೀ ಜಾನಕೀ ಅಂತ ಕೇಳಿದರೆ ಏನೂ ಮಾತಾಡದೇ ಸಾಹೇಬರ ಕೋಣೆಗೆ ಹೋಗಿ ಬಂದು ತನ್ನ ಕೆಲಸದಲ್ಲಿ ಮಗ್ನಳಾದಳು.

ಸೋಮು ರಾಧ ಟೇಬಲ್ ಕಡೆ ನೋಡಿ ರೀ ರಾಧ ಎಷ್ಟು ಸೀರೆ ತಗೊಂಡ್ರೀ, ಜಾನಕೀನೂ ತಗೊಂಡ್ರಾ, ಎಲ್ಲಿ ಅವರು ಬರಲಿಲ್ವಾ ಅಂತ ಕೇಳಿ ಭುಜ ಕುಣಿಸಿ ನಕ್ಕ. ರಾಧ ಸೋಮು ಕಡೆ ನೋಡಿ ಸರ್, ನೀವು ಇವತ್ತು ಮಾರ್ಕೆಟ್ ಬೀದೀಲಿ ರೇಷ್ಮೆ ಸೀರೆ ಸೇಲ್ ಇದೆ ಅಂತ ಹೇಳಿ ನಮ್ಮನ್ನು ಕಳಿಸಿದ್ದು ತುಂಬಾ ಒಳ್ಳೇದಾಯ್ತು ಸರ್. ಅಲ್ಲಿ ಯಾವುದೂ ಸೇಲ್ ಇರಲಿಲ್ಲ. ನಾವು ಇಡೀ ಬೀದಿ ಸುತ್ತಿದೆವು. ವಿಚಾರಿಸಿದರೆ ನಿಮಗೆ ಯಾರೋ ಸುಳ್ಳು ಹೇಳೀದಾರೆ ಇಲ್ಲಿ ಯಾವುದೂ ಸೇಲ್ ಇಲ್ಲ ಅಂದರು. ನಾವಿಬ್ಬರೂ ಹಿಂದಕ್ಕೆ ಬರ್‍ತಿದ್ದಾಗ ಯಾರೋ ಜಾನಕೀ ಅಂತ ಕೂಗಿದ ಹಾಗಾಯ್ತು. ನೋಡಿದರೆ ಐದು ವರ್ಷದ ಹಿಂದೆ ಜಾನಕೀನ ಬಿಟ್ಟು ಹೋಗಿದ್ದ ಅವಳ ಗಂಡ ಬಂದಿದ್ದರು ಸರ್. ಅವರು ಈಗೊಂದು ವರ್ಷದಿಂದ ಜಾನಕೀನ ಹುಡಕ್ತಿದ್ರಂತೆ ಸರ್. ಜಾನಕೀಗಂತೂ ತುಂಬಾ ಸಂತೋಷವಾಯಿತು. ಗಂಡನ ಜೊತೆ ಮನೆಗೆ ಹೊರಟು ಇವತ್ತು ಅರ್ಧ ದಿನ ರಜ ಹೇಳಿಬಿಡು ಅಂದಳು ಸರ್. ನೀವು ಟೈಂ ಪಾಸ್ ಮಾಡಿದ್ದು ಅವಳಿಗೆ ಮತ್ತೆ ಬದುಕು ಕಟ್ಟಿಕೊಡ್ತು ಅಂದಳು. ಸೋಮು ಹೀಗೂ ಆಗುತ್ತಾ ಅಂದುಕೊಂಡ.

ಮರುದಿನ ಜಾನಕೀ ಗಂಡನ ಜೊತೆ ಆಫೀಸಿಗೆ ಬಂದಳು. ಎಲ್ಲರಿಗೂ ಸಿಹಿ ಕೊಟ್ಟಳು. ಗಂಡನನ್ನು ಎಲ್ಲರಿಗೂ ಪರಿಚಯ ಮಾಡಿಕೊಟ್ಟಳು. ಸೋಮು ಹತ್ರ ಬಂದಾಗ ಇವರು ಟೈಂ ಪಾಸ್ ಸೋಮು. ಇವರ ಟೈಂ ಪಾಸ್ ಬುದ್ದಿಯಿಂದಲೇ ನನಗೆ ನೀವು ಮತ್ತೆ ದೊರಕಿದಿರಿ ಅಂದಳು. ಜಾನಕಿ ಗಂಡ ಸೋಮು ಕೈನ ನೋವಾಗುವ ಹಾಗೆ ಕುಲುಕಿದ. ಸಾಹೇಬರು ಹೊರಗೆ ಬಂದು ಸೋಮುನ ನೋಡಿ ಒಂದೊಂದ್ಸಾರಿನಾದರೂ ನೀವು ಒಳ್ಳೆ ಕೆಲಸ ಮಾಡ್ತೀರ ಕಣ್ರೀ ಅಂದರು.

ಮನೆಗೆ ಬಂದ ಸೋಮು ತನ್ನ ಟೈಂ ಪಾಸ್ ಬುದ್ದಿಯನ್ನು ಸೋಮಿ ಹತ್ರ ಕೊಚ್ಚಿಕೊಳ್ಳುತ್ತಿದ್ದಾಗ, ಅವಳು ಕೆಂಗಣ್ಣು ಬಿಟ್ಟು ಹೊರಗೆ ಏನಾದರೂ ಮಾಡ್ಕೊಳಿ ನನ್ನತ್ರ ಏನಾದರೂ ನಿಮ್ಮ ಟೈಂ ಪಾಸ್ ಬುದ್ದಿಯನ್ನು ತೋರಿಸೋಕೆ ಬಂದ್ರೆ ನಿಮ್ಮ ಟೈಮೇ ಸರಿಯಿಲ್ಲದ ಹಾಗೆ ಮಾಡಿಬಿಡ್ತೀನಿ ಅಂದಳು. ಆದರೂ ಸೋಮು ಈ ಟೈಂ ಪಾಸ್ ಜಾಲಕ್ಕೆ ಒಂದು ಸಾರಿನಾದರೂ ಸೋಮಿನ ಸಿಕ್ಕಿಸಬೇಕಲ್ಲ ಅಂತ ಯೋಚನೆ ಮಾಡ್ತನೇ ಇದಾನೆ.

## ಪೆನ್ನಿಂದ ಸಾವು – ಇದು ನಿಜವೇ – ಈ ಕಥೆ ಕೇಳಿ

| | |
|---|---|
| ಪೆನ್ನು ಕಳೆದುಹೋಯಿತು | – ಬರೆಯಲು ಈಗ ಪೆನ್ನಿಲ್ಲ |
| ಪೆನ್ನು ಇಲ್ಲ ಎಂದರೆ | – ನೋಟ್ಸ್ ಬರೆದುಕೊಳ್ಳೋಕೆ ಆಗಲ್ಲ |
| ಬರೆದುಕೊಳ್ಳೋಕೆ ಆಗಲ್ಲ ಎಂದರೆ | – ಅಭ್ಯಾಸ ಮಾಡೋದಕ್ಕಾಗೋದಿಲ್ಲ |
| ಅಭ್ಯಾಸ ಇಲ್ಲ ಎಂದರೆ | – ಪರೀಕ್ಷೆಯಲ್ಲಿ ನಪಾಸು |
| ಪರೀಕ್ಷೆಯಲ್ಲಿ ನಪಾಸು ಎಂದರೆ | – ಡಿಗ್ರಿ ಬರೋದಿಲ್ಲ |
| ಡಿಗ್ರಿ ಬರೋದಿಲ್ಲ ಎಂದರೆ | – ಕೆಲಸ ಸಿಗೋದಿಲ್ಲ |
| ಕೆಲಸ ಇಲ್ಲ ಎಂದರೆ | – ಖರ್ಚಿಗೆ ಹಣ ಇಲ್ಲ |
| ಖರ್ಚಿಗೆ ಹಣ ಇಲ್ಲ ಎಂದರೆ | – ಹೊಟ್ಟೆಗೆ ತಣ್ಣೀರು ಬಟ್ಟೆ |
| ಹೊಟ್ಟೆಗೆ ತಣ್ಣೀರು ಬಟ್ಟೆ ಎಂದರೆ | – ಅನಾರೋಗ್ಯ, ಸುಸ್ತು, ಸಂಕಟ |
| ಅನಾರೋಗ್ಯ ಸುಸ್ತು ಸಂಕಟ ಎಂದರೆ | – ನೋಡೋದಕ್ಕೆ ದರಿದ್ರವಾಗಿ ಕಾಣುತ್ತೀರ |
| ದರಿದ್ರವಾಗಿ ಕಂಡವನಿಗೆ | – ಪ್ರೇಯಸಿಯೂ ಇಲ್ಲ |
| ಪ್ರೇಯಸಿ ಇಲ್ಲ ಎಂದರೆ | – ಮದುವೆಯೂ ಇಲ್ಲ |
| ಮದುವೆ ಇಲ್ಲ ಎಂದರೆ | – ಮಕ್ಕಳೂ ಇಲ್ಲ |
| ಮಕ್ಕಳು ಇಲ್ಲ ಎಂದರೆ | – ಒಂಟಿಜೀವನ |
| ಒಂಟಿಜೀವನ ಎಂದರೆ | – ಮನೋರೋಗ |
| ಮನೋರೋಗ ಎಂದರೆ | – ಅನೇಕ ಕಾಯಿಲೆಗಳ ತವರು |
| ಅನೇಕ ಕಾಯಿಲೆಗಳು ಎಂದರೆ | – ಸಾವಿಗೆ ಹತ್ತಿರ ಎಂದರ್ಥ ಅದಕ್ಕೆ |
| ನಿಮ್ಮ ಪೆನ್ನು ಕಳೆದುಕೊಳ್ಳಬೇಡಿ | – ಹುಷಾರಾಗಿರಿ |

**ಸಂಗ್ರಹ : ಸುಕೇಶವ**

# ಹೆಸರಿನ ಸುತ್ತಮುತ್ತ

**– ಆನಂದ**

ನಾನು ನಾರ್ವೆ ದೇಶದಲ್ಲಿ ಇದ್ದಿದ್ದರೆ ನನ್ನ ಹೆಸರು ಆನಂದ ಆಗುತ್ತಿರಲಿಲ್ಲ. ಏಕೆಂದರೆ ಆನಂದ ಎಂದರೆ ಅದೊಂದು ಮನೋಸ್ಥಿತಿ. ಆ ಹೆಸರಿನಿಂದ ವ್ಯಕ್ತಿ ಗಂಡೊ ಹೆಣ್ಣೊ ಎಂದು ತಿಳಿಯಲಾಗುವುದಿಲ್ಲ. ಆ ದೇಶದ ಕಾನೂನು ಪ್ರಕಾರ ಒಬ್ಬ ವ್ಯಕ್ತಿಯ ಹೆಸರಿನಿಂದ ಲಿಂಗ ತಿಳಿಯುವಂತಿರಬೇಕು. ಇತ್ತೀಚೆಗೆ ತಂದೆತಾಯಿಯೊಬ್ಬರು ತಮ್ಮ ಮಗುವಿಗೆ ಬ್ಲೂ ಎಂದು ನಾಮಕರಣ ಮಾಡಿದಾಗ ಸರ್ಕಾರ ಆಕ್ಷೇಪ ಎತ್ತಿ ಪ್ರಕರಣ ನ್ಯಾಯಾಲಯಕ್ಕೆ ಹೋಯಿತು. ಹೆಸರು ಬದಲಿಸಿ ಇಲ್ಲದಿದ್ದರೆ ನಾವೇ ಮರುನಾಮಕರಣ ಮಾಡಬೇಕಾದೀತು ಎಂದು ನ್ಯಾಯಾಲಯ ಬ್ಲೂನ ಅಪ್ಪ ಅಮ್ಮನಿಗೆ ತಿಳಿಸಿತು.

ಆದರೆ ಈ ಮಹಾನ್ ಭಾರತದಲ್ಲಿ ಅಂತಹ ಕಾನೂನು ಕಟ್ಟಲೆ ಇಲ್ಲ. ಯಾರು ಯಾವ ಹೆಸರನ್ನು ಬೇಕಾದರೂ ಇಡಬಹುದು ಅಥವಾ ಇಟ್ಟುಕೊಳ್ಳಬಹುದು. ಆ ಹೆಸರನ್ನು ಹುಡುಕಲು ತಂದೆತಾಯಿ ಅದೆಷ್ಟು ಶ್ರಮ ಪಡುತ್ತಾರೆ? ಬಂಧುಬಳಗ, ಸ್ನೇಹಿತರೆಲ್ಲ ಸಹಾಯ ಹಸ್ತ ಚಾಚುತ್ತಾರೆ. ಗೂಗಲ್ ಮಾಮನ ನೆರವು ಸಹ ಪಡೆಯಲಾಗುತ್ತದೆ. ಈಗಂತೂ ಹೊಸ ಹೊಸ ಮಾದರಿ ಹೆಸರುಗಳು ಚಾಲ್ತಿಯಲ್ಲಿವೆ. ಆಕಾಶ, ಭೂಮಿ, ನದಿ, ನಕ್ಷತ್ರ  ಹೀಗೆ ಮಕ್ಕಳ ಹೆಸರುಗಳು ರಾರಾಜಿಸುತ್ತಿವೆ. ಹೆಸರು ಹೀಗಿದ್ದಾಗ ಮಗು ಗಂಡು ಹೆಣ್ಣು ಎಂದು ಮೇಲ್ನೋಟಕ್ಕೇ ತಿಳಿಯಲಾಗದು. ಸೊ ವಾಟ್. ಇದೇನು ನಾರ್ವೆ ಅಲ್ಲವಲ್ಲ.

ನಾನು ಗುಜರಾತಿನಲ್ಲಿದ್ದಾಗ ಜಯಂತಿ ಎಂಬಾಕೆ ನನ್ನ ಸಹೋದ್ಯೋಗಿಯಾಗಿದ್ದರು. ಆಕೆ ಸಹ ಕನ್ನಡತಿ. ನಮ್ಮ ಕಡೆ ಜಯಂತಿ ಎಂದರ ನಿಸ್ಸಂದೇಹವಾಗಿ ಹೆಣ್ಣು. ಆದರೆ ಗುಜರಾತಿನಲ್ಲಿ ಗಂಡಸರೂ ಜಯಂತಿ ಆಗಿರುತ್ತಾರೆ. ಜಯಂತಿಲಾಲ್ ಎಂಬ ಹೆಸರು ಗಂಡಸರಿಗೆ ಸಾಮಾನ್ಯ. ಒಂದು ದಿನ ನಮ್ಮ ಜಯಂತಿಗೆ ಒಂದು ರಿಜಿಸ್ಟರ್ಡ್ ಅಂಚೆ ಬಂದು. ಅಂಚೆಪೇದೆ ಜಯಂತಿ ಎಂಬ ಪುರುಷನಿಗಾಗಿ ಹುಡುಕತೊಡಗಿದ. ನಾನೇ ಆ ವಿಳಾಸದಾರಳು ಎಂದರೆ ಆ ಪೇದೆ ನಂಬುತ್ತಿಲ್ಲ. ನಾವೆಲ್ಲ ಸೇರಿ ಅವನ ಮನವೊಲಿಸಿದೆವು.

ಹಾಗೆಯೇ ಕುಮುದ ಎಂದರೆ ನಮ್ಮ ಕಡೆ ಸ್ತ್ರೀ. ಆದರೆ ನೀವು ವಿಂಧ್ಯ ಪರ್ವತ ದಾಟಿದರೆ ಕುಮುದ್ ಗಂಡಸಿನ ಹೆಸರಾಗುತ್ತದೆ. ವಿನೋದ ಎಂಬುದು ಹೆಂಗಸಾದರೆ ವಿನೋದ್ ಗಂಡಸು. ಶಶಿ ಎರಡೂ ಕಡೆ ಸಲ್ಲುತ್ತದೆ. ಶಶಿಕಲಾ ಹೆಂಗಸಾದರೆ ಶಶಿಧರ ಗಂಡಸು. ಹಾಗೆಯೇ ನಿರ್ಮಲ ನಿರ್ಮಲ್ ಆದರೆ ಲಿಂಗ ಬದಲಾಗುತ್ತದೆ. ವಿಐಪಿ ಉದಾಹರಣೆ ಬೇಕೆ? ಪ್ರಿಯಾಂಕಾ ಗಾಂಧಿ ಮತ್ತು ಪ್ರಿಯಾಂಕ್ ಖರ್ಗೆ.

ನನ್ನ ಅತ್ತಿಗೆ ಹೆಸರು ನನ್ನದೂ ಒಂದೇ ಆಗಿತ್ತು. ನಮ್ಮಣ್ಣನನ್ನು ಮದುವೆಯಾದ ಮೇಲೆ ಅವರ ಹೆಸರು ಬದಲಾಯಿತು. ಆದರೆ ಈಗಲೂ ಆಕೆಯ ಸಂಬಂಧಿಗಳು ಆಕೆಯನ್ನು ಅವರ ಪೂರ್ವಾಶ್ರಮದ ಹೆಸರಿನಲ್ಲೇ ಕರೆಯುತ್ತಾರೆ.

ನಮ್ಮಲ್ಲಿ ಹೆಸರಿಗೂ ಕೊರತೆ ಇಲ್ಲ. ನಾಮಕರಣ ಮಾಡುವದಕ್ಕೂ ನಿಯಂತ್ರಣ ಇಲ್ಲ. ಆದುದರಿಂದಲೇ ಬಿಪಿಎಲ್ ಕಾರ್ಡ್ ಹೊಂದಿರುವವರು ತಮ್ಮ ಮಕ್ಕಳಿಗೆ ಐಶ್ವರ್ಯ, ಕುಬೇರ, ಸಂಪತ್, ಲಕ್ಷ್ಮಿ ಎಂದು ಹೆಸರಿಡಲು ಹಿಂಜರಿಯರು. ಆದುದರಿಂದಲೇ ದುಡ್ಡಿಲ್ಲ ಕಾಸಿಲ್ಲ ಸಂಪತಯ್ಯಂಗಾರಿ, ರೆಕ್ಕೆ ಇಲ್ಲ ಪುಕ್ಕ ಇಲ್ಲ ಗರುಡಯ್ಯಂಗಾರಿ ಎಂಬ ಗಾದೆಗಳು ಹುಟ್ಟಿಕೊಂಡಿದ್ದು. ಆದರೆ ಇದು ಅಯ್ಯಂಗಾರ್‌ಗಳಿಗೇ ಏಕೆ ಅನ್ವಯಿಸಬೇಕು? ನನ್ನ ಮಿಡಲ್ ಸ್ಕೂಲ್ ಸಹಪಾಠಿಯ ಹೆಸರು ಪುರುಷೋತ್ತಮ ಗಾಂಧಿ. ಅವರಪ್ಪ ಅಪ್ಪಟ ದೇಶ ಭಕ್ತನಾಗಿದ್ದು ಆ ಹೆಸರು ಆರಿಸಿಕೊಂಡ ಅಷ್ಟೆ. ಆ ಗಾಂಧಿಗೂ ಇಂದಿನ ಅಥವಾ ಅಂದಿನ ಗಾಂಧಿಗೂ ಏನೂ ಸಂಬಂಧ ಇಲ್ಲ.

ಮಕ್ಕಳಿಗೆ ಹೆಸರಿಡಲು ಅಪ್ಪಅಮ್ಮ ಬಹಳ ತಿಣುಕಾಡುತ್ತಾರೆ. ಆ ಹೆಸರು ಪಡೆಯುವ ಮಗು ಆ ವಿಷಯದಲ್ಲಿ ತೀರಾ ಅಸಹಾಯಕ. ನಮ್ಮ ಅಪ್ಪಅಮ್ಮ ಇಟ್ಟ ಹೆಸರು ಸರಿ ಇಲ್ಲ ಎಂದು ಮಗ ಅಥವಾ ಮಗಳು ಬುದ್ಧಿ ಬಂದ ನಂತರ ಬದಲಾಯಿಸಿಕೊಂಡ ಉದಾಹರಣೆ ನನ್ನ ಗಮನಕ್ಕಂತೂ ಬಂದಿಲ್ಲ.

ಅಂದಹಾಗೆ ಆರ್ ಯು ಹ್ಯಾಪಿ ವಿತ್ ಯುವರ್ ನೇಮ್?

## ಸುಮ್ನೆ ಒಪ್ಕೊಂಬಿಡ್ತೀವಿ

ಹೆಸರು ಎನ್ನೋದು ಯಾವುದೋ ಒಂದು ವಸ್ತುವನ್ನು ಅಥವಾ ವ್ಯಕ್ತಿಯನ್ನು ಗುರುತಿಸೋಕೇ ಹೊರತು ಒಂದಕ್ಕೊಂದು ಸಂಬಂಧವಿರೋದಿಲ್ಲ, ಅಥವಾ ಇರಬೇಕಾಗೂ ಇಲ್ಲ. ಉದಾಹರಣೆಗೆ ಗುಂಡಣ್ಣ ಎನ್ನುವ ತೆಳ್ಳಗಿನ ವ್ಯಕ್ತಿ, ನೀಲವೇಣಿ ಎನ್ನುವ ಬಾಬ್ ಕಟ್ ಹುಡುಗಿ, ಸುಂದರರಾವ್ ಎನ್ನುವ ಅಷ್ಟೇನೂ ಸುಂದರವಲ್ಲದ ವ್ಯಕ್ತಿ, ಭೀಮಸೇನರಾವ್ ಎನ್ನುವ ಸಣಕಲ ವ್ಯಕ್ತಿ, ಶ್ರೀರಾಮ ಎನ್ನುವ ಬಹುಪತ್ನಿ ಉಳ್ಳ ವ್ಯಕ್ತಿ, ಶ್ರೀಕೃಷ್ಣ ಎನ್ನುವ ಏಕಪತ್ನೀ ವ್ರತಸ್ಥ, ಹೀಗೆ ನಮ್ಮ ನಡುವೆ ಹುಡುಕಿದರೆ ಬಹಳಷ್ಟು ಆಭಾಸಗಳು ದೊರೆಯುತ್ತವೆ. ಬುದ್ದಿವಂತಿಕೆ ಏನೆಂದರೆ ಹೆಸರು ಹೇಗಿದೆಯೋ ಹಾಗೇ ಒಪ್ಪಿಕೊಳ್ಳೋದು, ಏನಂತೀರ?

TEMPLE OF KNOWLEDGE

DISTANCE EDUCATION

(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

MBA WITH 6 SPECIALIZATIONS,
MA, M.COM, MCA, MSc-BT,
PGDCS, BA & B.COM - AGE BASIS

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

# ಬೀಳಿಸಿಬಿಟ್ಟೆ..

**- ವೈ.ಎಸ್. ಗುಂಡೂರಾವ್**

ಅಲ್ಲಾ, ನಾನ್ಯಾಕೆ ಹಾಗೆ ಮಾಡೋಕೆ ಹೋದೆ. ಅವರ್ನೆ ಕೇಳಿದ್ರೆ ತೆಕ್ಕೊಡ್ತಾಯಿರ್ಲಿಲ್ವಾ... ಎಂಥ ಕೆಲ್ಸ ಆಗೋಯ್ತು? ಈಗ ಅದು ಕೆಳಗೆ ಬಿದ್ದಿದ್ದರಿಂದ ವರ್ಕ್ ಆಗ್ತಾಯಿದ್ಯೋ ಇಲ್ವೊ? ಪಾಪ, ಹೊಸತು ಕೊಂಡುಕೊಳ್ಳೋವರ್ಗೂ ಏನ್ಮಾಡ್ತಾರೋ ಏನೋ ಎಂದು ಯೋಚಿಸುತ್ತಾ ಕ್ಕೂತಿದ್ದಾಗ ನಟೇಶ ಬಂದಿದ್ದು ತಿಳಿಯಲಿಲ್ಲ.

''ಏನ್ ಯೋಚ್ನೆ ಮಾಡ್ತಾಯಿದ್ದಿಯೋ, ಬೆಳಿಗ್ಗೆ ಬೆಳಿಗ್ಗೆ ತಿಂಡಿ ತಿಂದು ಸೋಫಮೇಲ್ ಕುಳಿತು ಹಗಲುಗನಸು ಕಾಣ್ತಾಯಿದ್ದೀಯಾ ಹೇಗೆ'' ಎಂದು ಭುಜದ ಮೇಲೆ ಹೊಡೆದಾಗಲೇ ನಾನು ಈ ಲೋಕಕ್ಕೆ ಬಂದುದು.

ನನ್ನ ಮುಖ ಮುಖ ನೋಡ್ತಾ ಏನಾಯ್ತು ಎಂದ ಮತ್ತೊಮ್ಮೆ.

ಕೂತ್ಕೊ ಹೇಳ್ತೀನಿ ಎಂದು ಎದುರು ಸೋಫಾದಲ್ಲಿ ಕುಳಿತುಕೊಳ್ಳಲು ಸೂಚಿಸಿ ಹೇಳತೊಡಗಿದೆ.

ಕಾಫಿ ಪುಡಿ ಮುಗಿದು ಹೋಗಿತ್ತು, ರಜನಿ ಕಾಫಿ ಪುಡಿ ತಗೊಂಬನ್ನಿ ಅಂದ್ಲಾ, ನಾನು ರೆಗ್ಯುಲರ್ ಆಗಿ ಹೋಗೋ ಕಾಫಿ ಪುಡಿ ಅಂಗಡಿಗೆ ಹೋಗಿ ಅರ್ಧ ಕೆ.ಜಿ. ಕೊಡಿ ಅಂದ್ನಾ. ಪುಡಿ ರೆಡಿ ಇಲ್ಲದ್ದರಿಂದ ಹುರಿದು ಪುಡಿ ಮಾಡ್ಕೊಡ್ತೀನಿ ಒಂದೈದು ನಿಮಿಷ ಅಂದ್ರೂ. ಸುಮ್ನೆ ನಿಂತು ಏನು ಮಾಡೋದು ಅಂತಾ ತಿಳಿಯದೆ, ಬಗ್ಗಿ ಟೇಬಲ್ ಮೇಲಿದ್ದ ನ್ಯೂಸ್ ಪೇಪರ್ ಎಳ್ಕೊಂಡ್ನಾ.. ಹಾಳಾದ್ದು ಪೇಪರ್ ಒಳಗೆ ಇದ್ದ ಟಿವಿ ರಿಮೋಟ್ ಕಂಟ್ರೋಲ್ ಕೆಳಗೆ ಬಿದ್ದು ಬಿಡಬೇಕೇ?

ಆಯ್ಯೋ ಅಷ್ಟೇತಾನೆ! ಅದಕ್ಯಾಕೆ ಯೋಚ್ನೆ ಮಾಡ್ತಾಯಿದ್ದೀಯಾ?

ಅಲ್ವೋ ನಟೇಶ, ಅದು ಕೆಳಕ್ಕೆ ಬಿದ್ದ ಮೇಲೆ ಸರಿಯಾಗಿ ಕೆಲ್ಸ ಮಾಡ್ತಾಯಿದ್ಯೋ ಇಲ್ವೋ? ನಿನ್ನೆ ಪೂರ್ತಿ ಟಿವಿ ನೋಡಿದ್ರೋ ಇಲ್ವೋ? ಎಷ್ಟು ಬೇಜಾರು ಮಾಡ್ಕೊಂಡಿರ್ತಾರೋ ಏನೋ! ಬಂದ ಗಿರಾಕಿಗಳ ಮುಂದೆ ಎಲ್ಲ ''ಯಾರೋ ಒಬ್ರು ಗಿರಾಕಿ ಬಂದಿದ್ರು ರಿಮೋಟ್ ಬಿಳಿಸ್ಬಿಟ್ರು... ವರ್ಕಾಗ್ತಾನೇ ಇಲ್ಲ'' ಅಂತ ನನ್ನ ಬೆನ್ನ ಹಿಂದಗಡೆ ಮರ್ಯಾದೆ ತೆಗೆದಿಕೊಡಿಲ್ವಾ?

ಥು ನಿನ್ನ, ಇಷ್ಟಕ್ಕೂ ಅದು ಒಂದು ಸಾರೆ ಕೆಳಕ್ಕೆ ಬಿದ್ದುಬಿಟ್ಟರೆ ಕೆಟ್ಟೋಗುತ್ತೆ ಅಂತಾ ಅದ್ಯಾವ ಮಹಾ ಸಂಶೋಧಕ ಹೇಳ್ದಾನಿಂಗೆ. ನಮ್ಮ ಮನೇಲಿ ಹುಡುಗರು ನೂರು ಸಾರಿ ಬೀಳಿಸಿರಬೋದೇನೋ, ಆದ್ರೂ ಏನೂ ಆಗಿಲ್ಲ ಗೊತ್ತಾ!

ಅದೇ ನನ್ನ ಯೋಚನೆ ನಟೇಶ. ನೂರು ಸಾರಿ ಅವರೇ ಬೀಳ್ಸಿದ್ದು, ನೂರೊಂದನೇ ಸಾರಿ ನಾನು ಬೀಳ್ಸಿ ಕೆಟ್ಟದ್ರೆ.... ನೂರು ಸಾರಿ ಬೀಳ್ಸಿದ್ದು ಮರ್ತು ಹೋಗಿ, ನೂರೊಂದನೇ ಸಾರಿ ಬೀಳಿಸಿದವನಿಗೆ ತಾನೇ ಶಾಪ ಹಾಕೋದು?

''ದ್ರಾಬೆ ಮುಂಡೇ, ನೀ ಬೀಳ್ಸಿದ್ರಿಂದ ಏನೂ ಆಗಿರೋಲ್ಲ, ಸುಮ್ನೆ ಯೋಚ್ನೆ ಮಾಡಿ ನನ್ನ ತಲೇನೂ ತಿನ್ನ ಬೇಡ, ಯೋಚಿಸೋದನ್ನ ಬಿಟ್ಟು ಹೊರಡು'' ಎಂದ

ಆದ್ರೂ ನನ್ನಂತಹ ಸಭ್ಯ ಮನುಷ್ಯನಿಂದ ಪಾಪ ಅವರ್ಗೆ ಎಷ್ಟು

ತೊಂದರೆಯಾಗಿದೆಯೋ ಏನೋ! ''ಅದೂ ಅಲ್ದೆ ಅವರಂಗಡಿಗೆ ಕಿಟ್ಟಿ ಅನ್ನೋಗಿರಾಕಿ ಪರ್ಮನೆಂಟಾಗಿ ಬರ್ತಾರೆ, ಅವರ ಮನೆಯಲ್ಲಿ ಮಕ್ಕಳ ಕಾಟ, ರಿಮೋಟ್ ಇವರ್ಗೆ ಕೊಡೋದೇ ಇಲ್ವಂತೆ, ಕಾಫಿಪುಡಿ ಅಂಗಡಿಗೆ ಬಂದ ಸ್ವಲ್ಪಹೊತ್ತು ಸಿನಿಮಾ ಅದೂ ಇದೂ ಅಂತಾ ನೋಡ್ಕೊಂಡು ಹೋಗ್ತಾಯಿರ್ತಾರಂತೆ.

ಪಾಪ ಅವರ್ಗಾದ್ರೂ ತೊಂದ್ರೆ ಆಗಿರೋಲ್ವಾ?. ಜೊತೆಗೆ ಟಿ–20 ಬೇರೆ ಶುರುವಾಗ್ತಾಯಿದೆ'' ಎಂದೆ,

ನಿನ್ನ ಹಾಳು ಯೋಚ್ನೆಗಿಷ್ಟು ಬೆಂಕಿ ಬಿತ್ತು. ಯಾವೋನೋ ಬಿಟ್ಟಿ ಬಂದು ಕೂತು ಟಿವಿ ನೋಡುವವನ ಬಗ್ಗೆ ನಿನ್ನ ಕನಿಕರದ ಹೊಳೆ ಹಾರಿಸ್ತಿದ್ಯಲ್ಲಾ ಏನು ಹೇಳೋಣ? ಹೋಗ್ಲಿ ಕಾಫಿಪುಡಿ ಅಂಗಡಿಗೆ ಹೋಗಿ ಕೇಳ್ಕೊಂಡು ಬಂದು ಬಿಡೋಣ್ವ?

''ಹಾಗೂ ಮಾಡ್ಬೋದು, ಆದ್ರೆ ಅಲ್ಲಿ ಒಂದು ತೊಂದ್ರೆ ಇದೆ, ಬೀಳ್ಸಿದ್ದೂ ಅಲ್ದೆ ತಿರುಗಾ ಬಂದು ನನ್ಮಗ ಅಂತ ಅಂಗಡಿ ಯಜಮಾನ್ರು ಮುಖ ಕಿವಿಚ್ಕೊಳ್ಳೊಲ್ವಾ?''

ಕಿವುಚ್ಕೊಂಡು, ಸಾರಿಗೆ ಹಾಕ್ಕೊಂಡು ರುಚಿರುಚಿಯಾಗಿ ಸಾರು ಕಾಯಿಸ್ಕೊಂಡು ಊಟ ಮಾಡಲಿ, ಮೊದಲು ಏಳು ಮೇಲೆ ಎಂದ ಕೊಂಚ ರೇಗುತ್ತಾ–

''ರೇಗಬೇಡ ನಟೇಶ, ಇದು ತುಂಬಾ ಗಂಭೀರವಾದ ವಿಷಯ, ನಂಗೇಕೋ ಬೀಳ್ಸಿದ್ದೂ ಅಲ್ದೆ ತಿರುಗಿ ಅವರ ಅಂಗಡಿ ಹತ್ರ ಹೋಗೋಕೆ ಭಯವಾಗ್ತಾಯಿದೆ.''

''ಥೂ ನಿನ್ನ, ಹಾಳಾದ ಕೆಲ್ಸಕ್ಕೆ ಬಾರದ ವಿಷಯಗಳು ನಿನ್ನ ತಲೆಯೊಳಗೆ ಅದು ಹೇಗೆ ಹೊಕ್ಕೊಳ್ಳುತ್ತೋ? ಆ ದೇವ್ರೇ ಬಂದು ಮಿದುಳಿಗೆ ಕೈಹಾಕಿ ಇಂಥದ್ದನ್ನೆಲ್ಲ ಹೊರಗೆ ಎಸೀಬೇಕಂತ ಕಾಣುತ್ತೆ'' ಎಂದು ಹೇಳಿ ಕೊಂಚ ಸೈಲೆಂಟಾದ ನಟೇಶ,

''ನೋಡು ನೀನು ಹೀಗೆ ಸೈಲೆಂಟಾಗಿ ಕೂತ್ರೆ ನಂಗೊಂಥರಾ ಆಗುತ್ತೆ'' ಎಂದೆ.

''ಮತ್ತಿನ್ನೇನು ಮಾಡು ಅಂತೀಯಯ್ಯಾ? ಹೋಗ್ಲಿ ರಿಮೋಟ್ ಬೀಳ್ಸಿದ್ ಮೇಲೆ ಹೇಗಿದೆ ಅಂತಾ ಕೇಳಿ ಬರೋಣ ಅಂದ್ರೆ ಅದಕ್ಕೂ ಬರ್ತಿಲ್ಲ, ಹೋಗ್ಲಿ ಬಾಯ್ಮುಚ್ಕೊಂಡು ಅಡಿಗಾಸ್ ಕಡೆ ಹೋಗಿ ಬರೋಣ ಅಂದ್ರೆ ಸೋಫಾಗೆ ಅಂಡು ಅಂಟಿಸ್ಕೊಂಡು ಕೂತಿದ್ಯಾ... ನಾನೇನ್ ಬಡ್ಕೊಳ್ಳಲ್ಲಯ್ಯಾ..'' ಎಂದ ಕಾಫಿ ಬೀಳಲಿಲ್ಲವಲ್ಲ ಎಂಬ ನಿರಾಶೆಯಿಂದ

ಹೋಗಿ ಅಡಿಗಾಸ್ ನಲ್ಲಿ ಕಾಫಿ ಕುಡಿದೆವು.

ನನ್ನ ತಲೆ ತುಂಬಾ ಬೀಳಿಸ್ಬಿಟ್ಟೆ. ಅನ್ನೋದೆ ತುಂಬ್ಕೊಂಡು ಮತ್ಯಾವ ವಿಷಯವು ಬಾಯಿಂದ ಬರ್ತಾನೆ ಇರ್ಲಿಲ್ಲ.

''ಪಾಪ, ರಿಮೋಟ್ ಕಂಟ್ರೋಲ್ ಗತಿ ಏನಾಗಿರುತ್ತೋ ಏನೋ'' ಎಂದೆ ಪುನಃ

ಥುತ್ ನಿನ್ನ, ಅದೇರಾಗ ಹಾಡ್ತಾಯಿದ್ರೆ ಹಾಕ್ತಿನ್ನೋಡು ಎಂದು ತಲೆ ಮೇಲ್ ಮೊಟಕಲು ಬಂದ. ಅಕ್ಕಪಕ್ಕದವರು ನೋಡ್ತಾಯಿದ್ದಾರೆ ಎಂದು ಸುಮ್ಮನಾದ.

ಬಿಸಿ ಬಿಸಿ ಕಾಫಿ ಕುಡಿದ ನಟೇಶನ ತಲೆಗೂ ಬಿಸಿ ಏರಿಬಿಟ್ಟಿತ್ತು. ಕೆಂಗಣ್ಣು ಮಾಡ್ಕೊಂಡು ನನ್ನನ್ನೇ ದುರುಗುಟ್ಟಿದ. ನಾನು ಏನೂ ಅರಿಯದ ಅಮಾಯಕನಂತೆ ಮನಸ್ಸಿನೊಳಗೆ ಹುಸಿನಗೆ ತುಂಬ್ಕೊಂಡು ನಿಂತಿದ್ದೆ.

ಈಗ ನನ್ನ ತಲೇಲಿದ್ದದ್ದನ್ನೆಲ್ಲಾ ನಟೇಶನ ತಲೆಗೆ ಬೀಳಿಸ್ಬಿಟ್ಟೆ. ಇನ್ನು ಅವನು ಯಾರ್ಯಾರ ಹತ್ರ ಹೇಳ್ಕೊಂಡು ಹೋಗ್ತಾನೋ? ಅವನಲ್ವಾ ಫಟ್ಟ

# RAMAIAH
Indic Specialty Ayurveda

RESTORATION HOSPITAL

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ
# ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

**ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.**

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA ON MODERN METHODS OF ANALYSIS FOR FOOD / DRUG / ENVIRONMENT FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

**- ದಂಡಿ**

✓ ನಾನೊಂದು ಹೊಸ ಪದ ಕಂಡು ಹಿಡಿದಿದ್ದೇನೆ. ಅದರ ಹೆಸರು ಕೃತಿಚೌರ್ಯ

✓ ನನ್ನ ಮಹದಾಸೆ ತೀರಿದೆ. ಮುಂದೇನು? ಇನ್ನೊಂದು ಮಹದಾಸೆ ಹುಡುಕು.

✓ ಹೆಚ್ಚೆಂದರೆ 100 ವರ್ಷ ಬದುಕುವ ನಮಗೆ ಸಸ್ಯಗಳಿಗೂ ಜೀವ ಇದೆ ಎಂದು ತಿಳಿಯಲು ಸಾವಿರಾರು ವರ್ಷಗಳು ಬೇಕಾಯಿತಲ್ಲ!

✓ ನನಗೆ ಕತ್ತಲಿನ ಭಯವಿಲ್ಲ. ಕಣ್ಣು ಕುರುಡಾಗಿಸುವ ಬೆಳಕಿನದೇ ಭಯ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

✓ ಐ ಡೋಂಟ್ ಫಿನಿಷ್ ಎನಿಥಿಂ

✓ ಇಷ್ಟ ಪಡುವ ಸತ್ಯ, ಬೇಸರ ಪಡುವ ಸತ್ಯ ಎಂಬುದಿಲ್ಲ. ಸತ್ಯವೆನ್ನುವುದು ಸತ್ಯ ಅಷ್ಟೆ.

✓ ಭಾರತೀಯರಿಗೆ ಭಾರೀ ಹಾಸ್ಯಪ್ರಜ್ಞೆ ಇದೆ ಆದರೆ ಜೋಕ್ ಮಾತ್ರ ಬೇರೆಯವರ ಬಗ್ಗೆ ಇರಬೇಕು.

✓ ಪಯಣದ ಖುಷಿ ಇರುವುದು ಪ್ರಯಾಣದಲ್ಲಿ, ಪಯಣದ ಕೊನೆಯಲ್ಲಿ ಅಲ್ಲ. ಒಂದು ಉತ್ತುಂಗದ ಶಿಖರವನ್ನು ಏರಿದವನಿಗೆ ಮರುಕ್ಷಣದಲ್ಲೇ ತಾನಲ್ಲಿ ಒಂಟಿಯಾಗಿದ್ದೇನೆ ಎಂದು ಅನಿಸುತ್ತದೆ.

✓ ಅಂದು: ಐ ಥಿಂಕ್ ದೇರ್ ಫೋರ್ ಆ್ಯಮ್. ಇಂದು: ಐ ಕ್ಲಿಕ್ ದೇರ್ ಫೋರ್ ಆ್ಯಮ್.

✓ ಮಾಹಿತಿ ತಂತ್ರಜ್ಞಾನದ ಹೆದ್ದಾರಿಗಳಲ್ಲಿ ಮಾತಿನ ಟ್ರಾಫಿಕ್ ಜ್ಯಾಮ್ ವಿಪರೀತವಾಗಿದೆ.

✓ ಪ್ರಕೃತಿ ಎಂಬ ಹುಡುಗಿ ಮುನಿಸಿಕೊಂಡಾಗ ಪ್ರಕೃತಿ ಮುನಿಸಿಕೊಂಡಿದೆ ಎಂದು ಹೇಳಬಹುದೆ?

✓ ಇಂಡಿಯ ವಿಥೌಟ್ ಕರಪ್ಷನ್ ಈಸ್ ಲೈಕ್ ಎ ಝೂ ವಿಥೌಟ್ ಅನಿಮಲ್ಸ್.

✓ ಯಾವುದನ್ನು ತೀರಿಸುವುದಕ್ಕೆ ಸಾಧ್ಯವೇ ಇಲ್ಲವೋ ಅದನ್ನು ಬಯಕೆ ಎನ್ನುತ್ತಾರೆ.

✓ ಯಾವುದೋ ಒಂದು ಮಟ್ಟದಲ್ಲಿ ಬೇರೆಯವರು ನಿಮಗಿಂತ ಯೋಗ್ಯರಾಗಿರುತ್ತಾರೆ.

✓ ಯು ವಿಲ್ ನೆವರ್ ನೊ ವಾಟ್ ಈಸ್ ಎನಫ್ ಅನಲೆಸ್ ಯು ನೊ ವಾಟ್ ಈಸ್ ಮೋರ್ ದ್ಯಾನ್ ಎನಫ್.

✓ ನಾನು ಎಂಬುದೊಂದು ಸಣ್ಣ ಪದ. ನಿಮ್ಮ ಶಬ್ದಕೋಶದಲ್ಲಿ ಅದನ್ನು ದೊಡ್ಡದಾಗಿಸಿಕೊಳ್ಳಬೇಡಿ.

✓ ಅಜ್ಞಾನವೇ ಪರಮ ಸುಖ ಎಂದಾದರೆ ಅವೆರಡೂ ಒಂದೇ ಎನ್ನಬಹುದೆ?

✓ ಪ್ಲಾಸ್ಟಿಕ್ ಅಥವಾ ಪ್ಲಾನೆಟ್? ಆಯ್ಕೆ (ನ)ನಿಮ್ಮದು.

# ವಿದ್ಯುತ್‌ಗೇ ಶಾಕ್!

• ಗಣೇಶ ಹೆಗ್ಗಡೆ

"ಕರೆಂಟನ್ನು ವ್ಯಾಂಪೈರ್‌ಸ್ಲ್ಲಿ ಅಳೀತಾರೆ. ವೋಲ್ಟೇಜ್ನ ರಿವೋಲ್ವ್‌ನಲ್ಲಿ ಅಳೀತಾರೆ ಅಲ್ಲೂರ?"

ಈ ಮೇಲಿನ ಶೀರ್ಷಿಕೆಯನ್ನು ಗಮನಿಸುವ ನಿಮಗೆ ಒಂದು ತರಹ ಶಾಕ್ ಆಗುತ್ತದೆ ಎಂಬುದು ನನ್ನ ಖಚಿತ ನಂಬಿಕೆ. ಯಾಕೆಂದರೆ ಮೊನ್ನೆ ನಡೆದ ಕಾಮನ್ ರೂಮ್ ಸಭೆಯಲ್ಲಿ ರಾಯರ ಮುಂದೆ ಕುಳಿತಿದ್ದ ನಮಗೆ ಇದೇ ರೀತಿ ಶಾಕ್ ಆಗಿತ್ತು. ಸಾಮಾನ್ಯವಾಗಿ ಕರೆಂಟಿನಿಂದ ಶಾಕ್ ಹೊಡೆಸಿಕೊಂಡ ಪ್ರಾಣಿ ಹಾಗೂ ವ್ಯಕ್ತಿಗಳ ಸವಿವರಗಳನ್ನು ಮೇಲಿಂದ ಮೇಲೆ ನಾವು ದಿನಪತ್ರಿಕೆ ಹಾಗೂ ಟಿ. ವಿ. ಮಾಧ್ಯಮಗಳಲ್ಲಿ ಗಮನಿಸಿರುತ್ತೇವೆ. ಆದರೆ ವಿದ್ಯುತ್ತಿಗೇ ಶಾಕ್ ಕೊಟ್ಟ ಘಟನೆಯ ವಿವರಗಳನ್ನು ರಾಯರು ಸಭೆಯಲ್ಲಿ ನೀಡಿದಾಗ ನಾವೆಲ್ಲಾ ಸೆಮಿ ಕೋಮಾದಲ್ಲಿ ತೇಲಿ ಹೋಗಿದ್ದೆವು. ಈ ವಿವರಗಳನ್ನು ರಾಯರ ಬಾಯಿಯಿಂದ ಕೇಳುವುದೇ ಒಂದು ಸೊಗಸು.

***

'ಮೊನ್ನೆ ಮಧ್ಯಾಹ್ನ ಇನ್ನೇನು ಊಟಕ್ಕೆ ಏಳಬೇಕು ಅನ್ನುವ ಹೊತ್ತಿಗೆ, ಮನೆಯ ಮುಂದೆ ಒಂದು ಪೊಲೀಸು ಎಸ್ಕಾರ್ಟು ಜೀಪು ಹಾಗು ಒಂದು ಸರ್ಕಾರಿ ಕಾರು ನಿಂತಂತಾಯ್ತು. ಜೀಪಿನಿಂದ ಇಳಿದ ಪೊಲೀಸು ಅಧಿಕಾರಿಯೊಬ್ಬರು ನೇರ ಬಾಗಿಲು ಬಳಿ ಬಂದಾಗ ನನ್ನ ಜಂಘಾಬಲವೇ ಉಡುಗಿದಂತಾಯ್ತು.

'ಸರ್, ತಾವು ವಿದ್ಯುತ್ ಇಲಾಖೆಯ ನಿವೃತ್ತ ಚೀಫ್ ಇಂಜಿನಿಯರ್ ತೋ...ರಾಯರು ತಾನೆ?

"ಹೌದು ತಾವ್ಯಾರು?" ಎಂದೆ.

"ಸರ್, ನಾವು ಮಿನಿಸ್ಟರ್ ಎಸ್ಕಾರ್ಟಿನವರು. ನಮ್ಮ ಜತೆ ಇಂಧನ ಇಲಾಖೆಗೆ ಹೊಸದಾಗಿ ನಿಯುಕ್ತಿಗೊಳಿಸಲ್ಪಟ್ಟ ಮಂತ್ರಿಗಳು ತಮ್ಮನ್ನು ಕಾಣಲು ಬಂದಿದ್ದಾರೆ. ಅವರಿನ್ನೂ ಇಲಾಖೆಯ ಚಾರ್ಜನ್ನು ತೆಗೆದುಕೊಂಡಿಲ್ಲ. ಅದಕ್ಕೆ ಮುಂಚೆ ನಿಮ್ಮೊಡನೆ ಕೆಲವು ಸಂದೇಹಗಳನ್ನು ನಿವಾರಿಸಿಕೊಳ್ಳಲು ಬಂದಿದ್ದಾರೆ. ನಿಮ್ಮ ಲ್ಯಾಂಡ್ ಲೈನಾಗಲಿ, ಮೊಬೈಲು ಫೋನಾಗಲಿ ತತ್‌ಕ್ಷಣಕ್ಕೆ ನಮ್ಮ ಕೈಗೆ ಸಿಗದೆ ಹ್ಯಾಗೊ ತಮ್ಮ ಮನೆಯ ವಿಳಾಸ ಪತ್ತೆ ಹಚ್ಚಿ ದಿಢೀರನೆ ಹೀಗೆ ನಾವು ಬರಬೇಕಾಯ್ತು. ಈಗ ಮಂತ್ರಿಗಳು ಕಾರಿನಿಂದಿಳಿಯಬಹುದೆ?

"ಖಂಡಿತಾ. ಐ ಆ್ಯಮ್ ಆನರ್ಡ್" ಎಂದೆ. ಬಿಳಿಯ ಖಾದಿ ದಟ್ಟಿ ಪಂಚೆ, ದೊಗಲೆ ಬಿಳಿಯ ಅಂಗಿ, ಹೆಗಲ ಮೇಲೆ ಬಿಳಿ ಟವಲು ಧರಿಸಿ ಕೂದಲು ಕೆದರಿದಂತಿದ್ದ ದಢೂತಿ ಆಸಾಮಿಯೊಬ್ಬರು ಕಾರಿನಿಂದಿಳಿದು ಸೀದಾ ಮನೆಯೊಳಗೆ ಬಂದು ಹಾಲಿನ ಸೋಫಾದ ಮೇಲೆ ಧೊಪ್ಪನೆ ಕುಳಿತು,

'ಶರಣು ಚೀಫ್ ಇಂಜಿನಿಯರ್ ಸಾಹೇಬರಿಗೆ' ಎಂದರು.

ನಮಸ್ತೆ ಸರ್ ಎಂದೆ.

'ನೋಡಿ ಬ್ಯಾಡಾ...ಬ್ಯಾಡಾ ಅಂತದ್ರೂ ಈ ಡಿಫಾರ್ಲ್ಮೆಂಟನ್ನು ನನ್ನ ಕುತ್ತಿಗೆಗೆ ತಗ್ಲು ಹಾಕಿ ಬುಟ್ಟವ್ರೆ. ಈ ಸರ್ಕಾರ ರಚಿಸೋದ್ರಲ್ಲೇ ನಮ್ಮ ಎನರ್ಜಿ ಬಿದ್ಹೋಗದೆ. ಇನ್ನು ಎನರ್ಜಿ ಡಿಪಾರ್ಟುಮೆಂಟು ಹೆಂಗಾ ನೋಡ್ಕೊಳ್ಳೋದು? ಹೋಗ್ಲಿ, ಅ ವಿಸ್ಯಬುಡಿ. ನಾಳೆ ದಿವ್ಸ ಚಂದಾಗದೆ ಚಾರ್ಜು ತಗೊಂಡ್ಮೇಲೆ ಅಧಿಕಾರಿಗಳ ಸಭೇನ ಕರೀಬೇಕೂಂತ ಇವ್ನಿ. ಆದ್ರೆ ಹಾಳಾದ್ದು ಆ ಕಾವೇರಿ ಭವನದ ವಾಸ್ತೂನೆ ಸರಿ ಬರ್ತಿಲ್ಲ ಅಂತಾ ಜ್ಯೋತಿಷಿಗಳು ಬ್ಯಾರೆ ಹೆದರಿಸವ್ರೆ. ಅದರ ಮುಖ್ಯದ್ವಾರ ದಕ್ಷಿಣದ ದಿಕ್ಕಿಗೈತೆ. ಅದಕ್ಕೇ ನಾನು ಹಿಂದಾಗಡೆ ಅಂತಂದ್ರೆ, ಈಗ ಕೋರ್ಟು ಕಛೇರಿಗಳು ಇದೆಯಲ್ಲಾ ಆ ಕಡೆ ಯಾವುದಾದ್ರು ಬಾಗ್ಲಿಂದ ಪ್ರವೇಸ ಮಾಡ್ಬೇಕೂಂತ ಇವ್ನಿ. ಅಂದ್ಹಾಗೆ ಈ ಕರೆಂಟು ವಿಚಾರದ ಬಗ್ಗೆ ನನಗೊಂದಿಷ್ಟು ಫಂಡಮೆಂಟಲ್ ಡೌಟ್ಸ್ ಅವೆ. ಯಾರೊ ತಮ್ಹೆಸ್ರು ಸೂಚಿಸಿದ್ರು. ಅದಕ್ಕೆ ಗುಟ್ಟಾಗಿ ಹುಡ್ಕೊಂಡು ಬಂದಿವ್ನಿ. ನಿಮ್ಗೊತ್ತಲ್ಲ ಮನೇ ಹತ್ರ ಟಿ. ವಿ. ಮಾಧ್ಯಮದವರ ಕಾಟ."

'ಗೊತ್ತು ಸರ್ ಈಗ ಹೇಳಿ ನನ್ನಿಂದ ತಮಗೆ ಏನ್ ಕ್ಲ್ಯಾರಿಫಿಕೇಷನ್ ಬೇಕು.'

'ಕರೆಂಟನ್ನು ವ್ಯಾಂಪೈರ್ಸ್‌ಲ್ಲಿ ಅಳೀತಾರೆ. ವೋಲ್ಟೇಜ್ನ ರಿವೋಲ್ಟ್‌ನಲ್ಲಿ ಅಳೀತಾರೆ ಅಲ್ಲೂರ?"

"ಇಲ್ಲ ಮಹಾಸ್ವಾಮಿ, ವ್ಯಾಂಪೈರ್ಸ್ ಅಂತಂದ್ರೆ ದೆವ್ವಭೂತದ ಕ್ಯಾಟೆಗರೀಗೆ ಬರುತ್ತೆ. ಕರೆಂಟನ್ನು ಆ್ಯಂಪೈರ್ಸ್‌ನಲ್ಲಿ ಅಳೀತಾರೆ. ಹಾಗೆಯೆ ರಿವೋಲ್ಟ್ ಅಂದ್ರೆ ಬೇರೆಯೆ ಅರ್ಥ ಬರುತ್ತೆ. ಸಂಪುಟ ರಚನೆ ಟೈಮಿನಲ್ಲಿ ನಿಮಗಿದರ ಅನುಭವ ಆಗಿರ್ಬೇಕು, ವೋಲ್ಟೇಜನ್ನು ವೋಲ್ಟ್‌ನಲ್ಲಿ ಅಳೀತಾರೆ".

"ನಮಗೆ ಸಪ್ಲೈ ಆಗ್ತಿರೋ ಕರೆಂಟಿನ ಫ್ರೀಕ್ವೆನ್ಸಿ ಐವತ್ತು ಮೋಟಾರ್ ಸೈಕಲ್ಲು ತಾನೆ"

"ತಪ್ಪು ಮಹಾಸ್ವಾಮಿ, ತರಂಗಾಂತರ ಐವತ್ತು ಸೈಕಲ್ಸ್‌ನಲ್ಲಿ ಎ.ಸಿ. ಕರೆಂಟು ಸರಬರಾಜು ಆಗ್ತಿದೆ. ಅಮೆರಿಕೆಯಲ್ಲಿ ಅದು ಅರವತ್ತು ಸೈಕಲ್ಲು ಇದೆ.'

'ಹೋಗ್ಲಿ ಬಿಡಿ, ಈವರ್ಸ ನಮ್ಮ ರಾಜ್ಯದಲ್ಲಿ ಸಂದಾಗಿ ಮಳೆ ಆಗ್ತಿದೆ. ಹರಿದು ಬರುವ ಹೆಚ್ಚಿಗೆ ನೀರೆಲ್ಲಾ ಉಪಯೋಗಿಸಿ ಕರೆಂಟು ಸ್ಟೋರ್ ಮಾಡಿ

ನಮ್ಗೆ ಬೇಕಾದ ಸಮಯಕ್ಕೆ ಅಂದ್ರೆ ಉದಾಹರಣೆಗೆ ಈ ಎಲೆಕ್ಷನ್ ಟೈಮಿನಲ್ಲಿ ಹಂಚುವುದಕ್ಕೆ ಆಗಕ್ಕಿಲ್ಲವೇ?"

"ಖಂಡಿತ ಆಗುಲ್ಲ ಮಹಾಸ್ವಾಮಿ, ನಮ್ಮ ಸರಬರಾಜು ವ್ಯವಸ್ಥೆಯಲ್ಲಿರುವುದು ಎ. ಸಿ. ಕರೆಂಟು, ಅಂದ್ರೆ ಆಲ್ಟರ್ನೇಟಿಂಗ್ ಕರೆಂಟು. ಇದನ್ನು ಸ್ಟೋರು ಮಾಡಲು ಆಗುವುದಿಲ್ಲ."

"ಮತ್ತೆ ನಮ್ಮ ಮನೀವಳ್ಗೆ ಕೆ.ಇ.ಬಿ. ಕರೆಂಟು ಹೋದ್ರೆ ಬ್ಯಾಟರಿಯಿಂದ ಸ್ಟೋರಾಗಿದ್ದ ಕರೆಂಟು ಬತ್ತದಲ್ರೀ."

'ಹೌದು ಮಹಾಸ್ವಾಮಿ. ಬ್ಯಾಟರಿಯಿಂದ ಇನ್ವರ್ಟರ್ ವ್ಯವಸ್ಥೆಗೆ ಕರೆಂಟು ಹೋಗಿ ಮತ್ತೆ ಎ.ಸಿ. ವ್ಯವಸ್ಥೆಯಲ್ಲೇ ಸರಬರಾಜು ಆಗುತ್ತೆ"

'ಹಂಗಾದ್ರೆ ಈ ಎ. ಸಿ. ವ್ಯವಸ್ಥೆಯನ್ನೇ ಕಿತ್ತಾಗ್ಬುಟ್ಟು ಡಿ. ಸಿ. ವ್ಯವಸ್ಥೆಗೆ ಆರ್ಡರ್ ಮಾಡ್ಲೇನ್ರೀ? ನಮ್ಮ ಹೊಸ ಸಮ್ಮಿಶ್ರ ಸರ್ಕಾರಕ್ಕೂ ವಳ್ಳೇ ಹೆಸ್ರು ಬತ್ತದೆ"

"ಇದೂ ಸಾಧ್ಯವಿಲ್ಲ ಮಹಾಸ್ವಾಮಿ. ಯಾಕೆಂದರೆ ಎ.ಸಿ. ವಿತರಣೆಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಉಪಯೋಗಿಸಿ, ವೋಲ್ಟೇಜನ್ನು ಹೆಚ್ಚು ಅಥವಾ ಕಡಿಮೆ ಮಾಡುವ ವ್ಯವಸ್ಥೆ ಇರುತ್ತೆ. ಆದರೆ ಡಿ.ಸಿ.ಯಲ್ಲಿ ಈ ಅನುಕೂಲವಿಲ್ಲ."

'ಇದೇನ್ರಿ ಎಲ್ಲದಕ್ಕೂ ಒಂದು ಯಡವಟ್ಟುತ್ತರ ಹೇಳ್ತೀರಿ. ಅಂದಮ್ಯಾಕೆ ಯಾರೂ ಡಿಸಿ ಟ್ರಾನಸ್ಸಿಸ್ಟರ್‌ನ ಕಂಡು ಹಿಡಿದಿಲ್ಲವೇನ್ರೀ?

"ಇಲ್ಲ ಮಹಾಸ್ವಾಮಿ, ಖಾವಂದರು ದಯವಿಟ್ಟು ಕ್ಷಮಿಸಬೇಕು. ಅದು ಟ್ರಾನ್ಸಿಸ್ಟರ್ ಅಲ್ಲ, ಟ್ರಾನ್ಸ್‌ಫಾರ್ಮರ್"

"ಹೋಗ್ಲಿ ಬುಡಿ, ಈಗ ನಿಮ್ಮ ಬುಡಕ್ಕೇ ಬತ್ತಾ ಇವ್ನಿ. ಜನರೇಟಿಂಗ್ ಸ್ಟೇಷನ್ನಿನಲ್ಲಿ ನೀರಿನಿಂದ ಕರೆಂಟು ತಯಾರಿಸಿ, ನೀರನ್ನು ಆಚೆ ಕಾಲುವೆಗೆ ಬುಡ್ತಾರೋ? ಇಲ್ಲವೋ?

'ಬಿಡ್ತಾರೆ'

'ಹ್ಞಾಂ ಈಗ ಸಿಕ್ಕಿಹಾಕ್ಕೊಂಡ್ರಿ, ಏನ್ರಿ? ಸೇಫ್ಟಿ ಮೆಸರ್ಸು ತೆಗೆದುಕೊಂಡಿದ್ದೀರಿ? ಯಾರಾದ್ರೂ ಗೊತ್ತಿಲ್ದೆ ಆ ನೀರನ್ನು ಮುಟ್ಟಿ ಶಾಕ್ ಹೊಡೆಸಕೊಂಡ್ರೆ ಗತಿಯೇನ್ರಿ? ನಮ್ಮ ರೈತರೆಲ್ಲಾ ಹೆಚ್ಚೂ ಕಮ್ಮಿ ಜಮೀನಿನಲ್ಲಿ ನೀರು ಹಾಯ್ಸುವಾಗ ಸಾಯ್ತಿರೋದು ಹಿಂಗೇಯೇನ್ರಿ?'

"ಕ್ಷಮಿಸಬೇಕು ಮಹಾಸ್ವಾಮಿ, ತಮಗೆಲ್ಲೋ ತಪ್ಪು ಮಾಹಿತಿ ರವಾನೆಯಾಗಿ ಹೋಗಿದೆ. ರಭಸದಿಂದ ಬೀಳುವ ನೀರಿನ ಶಕ್ತಿ ಉಪಯೋಗಿಸಿ ಟರ್ಬೈನು, ಜನರೇಟರ್ ಉಪಯೋಗಿಸಿ ಕರೆಂಟು ತೆಗೀತಾರೆ, ತಾವು ತಿಳಿದ ಹಾಗೆ ನೀರಿನಲ್ಲಿ ಕರೆಂಟಿನ ಅಂಶ ಇರುವುದಿಲ್ಲ".

"ಅಂದ್ಹಾಗೆ ಇನ್ನೊಂದು ಡೌಟು"

"ಸಂಕೋಚವಿಲ್ಲದೆ ಕೇಳಿ ಮಹಾಸ್ವಾಮಿ"

"ನೀರಿನಿಂದ ಕರೆಂಟು ತೆಗೀತೀರ. ಕಲ್ಲಿದ್ದಲು ಉಪಯೋಗಿಸಿ ಕರೆಂಟು ತೆಗೀತೀರಿ. ಅದೇನೋ ಅಣು ಉತ್ಪಾದನೆ ಅಂತೀರಿ. ಅಲ್ಲಿಂದ್ಲೂ ಕರೆಂಟು ತೆಗೀತೀರಿ. ಮತ್ತೆ ಯಾತ್ಯಾತರಿಂದ್ಲೋ ಕರೆಂಟು ತೆಗೀತೀರಿ. ಇವನ್ನೆಲ್ಲಾ ಅದ್ಹೆಂಗ್ರಿ ಒಟ್ಟಾಗಿ ಮಿಕ್ಸ್ ಮಾಡಿ ಜನಕ್ಕೆ ಕೊಡ್ತೀರಿ? ವಿದ್ಯುತ್ ಶಾರ್ಟ್ ಆಗಿ ಆ್ಯಕ್ಸಿಡೆಂಟು ಆಗುಲ್ಲವೇನ್ರಿ?

'ಹಾಗಾಗುಲ್ಲ, ಇದಕ್ಕೆ ಗ್ರಿಡ್ ಸಿಸ್ಟಮ್ ವಿತರಣೆ ಅನ್ನುತ್ತೀವಿ, ಇದನ್ನು ವಿವರಿಸುತ್ತಾ ಹೋದ್ರೆ ತಮಗೆ ಖಂಡಿತಾ ಅರ್ಥ ಆಗುಲ್ಲ, ಮಹಾಸ್ವಾಮಿ, ಬ್ರೈನು ಡ್ಯಾಮೇಜು ಆದೀತು ಎಂಬ ಭಯಬ್ಯಾರೆ"

"ಹಂಗಾದ್ರೆ ಬ್ಯಾಡಬುಡಿ, ಈಗ ವಸಿ ಮೀಟರ್ ವಿಚಾರ ಹೇಳಿ, ಈ ಹಿಂದೆ ತಿರುಗೋ ಚಕ್ರ ಇರೋ ಮೀಟರ್ ಇದ್ವಂತಲ್ರಿ. ಅದೆಲ್ಲಾ ಸಾರಾಸಗಟಾಗಿ ತೆಗ್ದು ಹಾಕ್ಬುಟ್ಟು ಅದೆಂಥದೋ ಎಲೆಕ್ಟ್ರಾನಿಕ್ ಮೀಟರ್ ಹಾಕಿದೀರಂತಲ್ರೀ?'

"ಹೌದು ಸ್ವಾಮಿ, ಈ ವ್ಯವಸ್ಥೆಯಿಂದ ವಿದ್ಯುತ್ ಸರಬರಾಜು ಕಂಪನಿಗಳ ಆದಾಯ ಹೆಚ್ಚಿದೆ. ವಿದ್ಯುತ್ ಕಳ್ಳತನಗಳೂ ಕಡಿಮೆ ಆಗಿವೆ."

"ಈ ಎಲೆಕ್ಟ್ರಾನಿಕ್ ಮೀಟರಿನಲ್ಲಿ ಒಂದಪಾಯ ಇದೆಯಂತಲ್ರೀ?"

'ಏನು ಮಹಾಸ್ವಾಮಿ'?

'ಈ ಮೀಟರ್‌ಗಳು ಯೂನಿಟ್ಟು, ಕರೆಂಟು, ವೋಲ್ಟೇಜು ಜತೆಗೆ ಮ್ಯಾಕ್ಸಿಮಂ ಡಿಮ್ಯಾಂಡನ್ನೂ ತೋರ್ಸುತ್ತೆ ಅಂತಾ ಹೇಳ್ತಾರಲ್ರಿ?"

'ಹೌದು ಸ್ವಾಮಿ'

"ಅಂತಂದ್ರೆ ನಮ್ಮ ಇಲಾಖಾ ಅಧಿಕಾರಿಗಳು ಒಂದೊಂದು ಕೆಲ್ಸಕ್ಕೆ ಇಷ್ಟಿಷ್ಟು ಡಿಮ್ಯಾಂಡ್ ಫಿಕ್ಸ್ ಮಾಡಿರೊ ವಿಚಾರ. ಈ ಮೀಟರ್‌ಗಳು ತೋರ್ಸುತ್ತಂತಲ್ರಿ. ನಮ್ಮ ಮನೇಲೂ ಇಂಥದೆ ಮೀಟರ್ರು ಇತ್ತೀಚೆಗೆ ಹಾಕವ್ರಂತೆ. ಅಂತಂದ್ರೆ ನಮ್ಮ ಮನೇಲಿ ನಾವು ಮಾಡುವ ಡೇಂಜರ್ ವ್ಯವಹಾರಗಳನ್ನೆಲ್ಲಾ ಇವು ರೆಕಾರ್ಡು ಮಾಡ್ಬುಟ್ರೆ ನಮ್ ಗತಿ ಏನ್ರಿ?"

'ಕ್ಷಮಿಸಿ ಮಹಾಸ್ವಾಮಿ. ಇಲ್ಲೂ ತಮಗೆ ತಪ್ಪು ಮಾಹಿತಿ ರವಾನೆಯಾಗಿದೆ. ಮೀಟರ್‌ಗಳು ಮ್ಯಾಕ್ಸಿಮಂ ಡಿಮ್ಯಾಂಡು ಇಂಡಿಕೇಟು ಮಾಡುವುದು. ಅಂದ್ರೆ ಗ್ರಾಹಕ ವಿದ್ಯುತ್ ಲೋಡನ್ನು ಉಪಯೋಗಿಸಿದ ಅನುಸಾರವಾಗಿ ರೆಕಾರ್ಡೆಡ್ ಲೋಡಿನ ಲೆಕ್ಕಾಚಾರ ಹಾಕುತ್ತದೆ. ಈ ವಿಚಾರದಲ್ಲಿ ತಾವು ಅನ್ಯಥಾ ಗಾಬರಿ ಪಡುವ ಅಗತ್ಯವಿಲ್ಲ.'

'ನಾನು ಟೂರ್ ಹೋಗುವಾಗ ನೋಡ್ತಿರ್ತೀನಿ. ದೊಡ್ಡ ದೊಡ್ಡ ಪವರ್ ಸ್ಟೇಷನಿನಲ್ಲಿ ಎರಡು ಟ್ರಾನ್ಸ್‌ಫಾರ್ಮರ್‌ಗಳು ಇರುತ್ವಲ್ಲ ಯಾಕ್ರೀ?'

'ಸರ್, ಇದಕ್ಕೆ ಪ್ಯಾರಲಲ್ ಆಪರೇಷನ್ ಅಂತಾರೆ. ಪವರ್ ಅನ್ನು (ಲೋಡ್) ಅವರೆಡೂ ಶೇರ್ ಮಾಡುತ್ತವೆ'

'ಓ ! ಅರ್ಥವಾಯ್ತು ಬುಡಿ, ಒಂಥರಾ ನಮ್ಮ ಸಮ್ಮಿಶ್ರ ಸರ್ಕಾರ ಇದ್ದಂಗೆ'

ಅಷ್ಟರೊಳಗೆ ಸಚಿವರ ಫೋನ್ ರಿಂಗಣಿಸಿತು.

'ವ್ಹಾಟ್? ನಿನ್ನೆಯಿಂದಲೂ ನಮ್ಮ ಕಾನ್‌ಸ್ಟುಯೆನ್ಸೀಲಿ ಪವರ್ ಇಲ್ವೇ? ಟ್ರಾನ್ಸ್‌ಫಾರ್ಮರ್ ಹೋಗಿದೆಯೇ? 'ಟ್ರಾನ್ಸ್‌ಫಾರ್ಮರ್ ಎಕ್ಸ್‌ಪೈರ್ಡ್, ಸ್ಟಾರ್ಟ್ ಇಮ್ಮಿಡಿಯಟ್ಲಿ' ಅಂತ ಆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಮೆಸೇಜ್ ಹಾಕ್ರೀ...ಹ್ಞಾ... ಮೆಸೇಜು ನೋಡಿ ಅವರೇ ಎಕ್ಸ್‌ಪೈರ್ಡ್ ಆಗ್ಬುಟ್ರೆ, ಎಂತ ಅಪಸಕುನ ಆಯ್ತ್ರಿ, ನಾಳೆ ಹೆಂಗ್ರೀ ಚಾರ್ಜು ತಗಳ್ಳಿ, ಮತ್ತೆ ಜೋಯಿಸರ ಬಳಿ ಓಡಬೇಕು..."

ಹಾಗೆಂದ ಸಚಿವರು ಗಲಿಬಿಲಿಯಿಂದ ಎದ್ದು ನನ್ನತ್ತ ತಿರುಗಿ, 'ನೋಡಿ ಸಾಹೇಬರೇ ತಮ್ಮನ್ನು ಭೇಟಿಯಾದ ಮೇಲೆ ಸಾಕಷ್ಟು ವಿಚಾರ ನಾನು ತಿಳ್ಕೊಂಡ ಹಾಗಾಯ್ತು. ನೀವು ಯಾವುದಕ್ಕೂ ಸಿದ್ಧವಾಗಿರಿ. ನಿಮ್ಮನ್ನು ನನ್ನ ಇಲಾಖೆಯ ಚೀಫ್ ಅಡ್ವೈಸರ್ ಆಗಿ ಮುಂದಿನ ವಾರದಿಂದ ನೇಮಿಸ್ಕೋತೀನಿ. ತಮ್ಮನ್ನು ಭೆಟ್ಟಿಯಾದ್ಮೇಲೆ ನನ್ಗೆ ಹೆಚ್ಚು ಕಾನ್ಫಿಡೆನ್ಸು ಬಂತು. ಈ ಕೂಡಲೇ ಅಧಿಕಾರಿಗಳ ಸಭೆ ಕರೆಯಲು ಸಚಿವಾಲಯದಿಂದ ಫಾಕ್ಸ್ ಕಳುಹಿಸ್ತೀನಿ' ಎಂದರು.

'ತಮ್ಮ ಮರ್ಜಿ ಮಹಾಸ್ವಾಮಿ... ಆದರೂ ಫಾಕ್ಸ್ ಕಳುಹಿಸೋಕ್ಮುಂಚೆ ಇನ್ನೊಂದ್ಸರಿ ಯೋಚ್ನೆ ಮಾಡಿ. ಕೇಂದ್ರದ ಮಂತ್ರಿ ಮನೇಕಾ ಗಾಂಧಿಯವರು ತಮಗೆ ನೋಟೀಸ್ ಕಳುಹಿಸ್ತಾರು".

'ಹೌದ್ರಿ ನಮ್ಮ ಒಂದೊಂದು ನಡೇನು ಕೇಂದ್ರದವರು ಅಬ್ಸರ್ವ್ ಮಾಡ್ತಿರ್‍ತಾರೆ. ನಾನಿನ್ನು ಹೊರಡ್ತೀನಿ, ಇನ್ನೇನು ಯಮಗಂಡ ಕಾಲ ಬತ್ತಾ ಇದೆ. ಸಚಿವ ಸ್ಥಾನ ಸಿಗದ ಅತೃಪ್ತ ಶಾಸಕರೆಲ್ಲಾ ರೆಸಾರ್ಟಿನಲ್ಲಿ ಸೇರವ್ರೆ, ಅವರ್ನ ಸಮಾಧಾನ ಪಡಿಸ್ಬೇಕು.'

ನೂತನ ಸಚಿವರು ಹೊರಟು ಹೋಗಿ ಬಹುಕಾಲ ಕಳೆದಿದ್ದರೂ, ಬೊಂಬೆಯಂತೆ ವೆರಾಂಡದಲ್ಲಿ ನಿಂತಿದ್ದ ನನ್ನನ್ನು ಕಂಡ ಹೆಂಡತಿ ಗಾಬರಿಯಾಗಿ, 'ರ್‍ರೀ...ಇದೇನ್ರಿ? ಒಳ್ಳೆ ಶಾಕ್ ಹೊಡೆದವರಂತೆ ನಿಂತಿದ್ದೀರಿ'? ಎಂದು ಎಚ್ಚರಿಸಿದಳು.

'ವಿದ್ಯುತ್‌ನಿಂದ ಶಾಕ್ ಹೊಡೆಯಲಿಲ್ಲ ಕಣೆ, ಈಗ ಹತ್ತು ನಿಮಿಷದ ಹಿಂದೆ ವಿದ್ಯುತ್ತಿಗೇ ಒಂದು ದೊಡ್ಡ ಶಾಕ್ ಹೊಡೆಯಿತು' ಎಂದೆ.

ರಾಯರು ಕಹಾನಿ ನಿಲ್ಲಿಸಿ ಯಾಕೊ ಅನುಮಾನಗೊಂಡು ನಮ್ಮತ್ತ ಕೊಂಕು ನೋಟ ಬೀರಿ

'ಸಭೆ ಬರಖಾಸ್ತು' ಎಂದರು.

ದಾರಿಯಲ್ಲಿ ರಾಯರನ್ನು ಕುರಿತು "ಈ ಮಂತ್ರಿಗಳೆಲ್ಲಾ ಚೆನ್ನಾಗಿ ಓದಿದವರಾಗಿದ್ದರೆ ಇಂಥಹ ದುಃಸ್ಥಿತಿ ರಾಜ್ಯಕ್ಕೆ ಖಂಡಿತಾ ಬರುತ್ತಿರಲಿಲ್ಲ' ಎಂದೆ.

'ಟ್ರೂ ಮೈ ಬಾಯ್. ಆದ್ರೆ ನನ್ನ ಭಯ ಇದಲ್ಲ, ಕಾಲಕ್ರಮೇಣ ಸಹವಾಸ ದೋಷದಿಂದ ನಾನೂ... ಇವರಂತಾಗಿ ಹೋದರೆ?' ರಾಯರ ಈ ಮಾತು ಕೇಳಿ ನಮಗೂ ಒಂದು ಕ್ಷಣ ಶಾಕ್ ಹೊಡೆದ ಅನುಭವವಾಯಿತು. ಆದರೂ ಸಾವರಿಸಿಕೊಂಡ ನಾನು, ಕೇಳಲೋ? ಬ್ಯಾಡವೋ ಎಂಬ ಜಿಜ್ಞಾಸೆಯಿಂದ ಹೊರಬಂದು, 'ಸರ್, ನನಗೆ ಇನ್ನೂ ಒಂದು ಡೌಟು, ಸಂಜೆಯಿಂದಲೂ ಕಾಡ್ತಿದೆ' ಅಂದೆ.

'ಎಸ್. ಅದೇನು ಕೇಳಯ್ಯ ಬಿ ಫ್ರೀ" ಎಂದರು ರಾಯರು.

'ಸರ್, ನಿಜವಾಗ್ಲು ನೀರಿನಲ್ಲಿ ಕರೆಂಟು ಇರೋಲ್ವೆ? ಯಾಕೆಂದರೆ ಹೋದ ವರ್ಷ ಚುಂಚನಕಟ್ಟೆಗೆ ಪ್ರವಾಸ ಹೋಗಿದ್ದಾಗ, ತಾವು ನಮ್ಮನ್ನೆಲ್ಲಾ ಉದ್ದೇಶಿಸಿ, 'ಯಾರೂ ನೀರಿಗಿಳಿಯಬೇಡಿ, ಈ ನೀರಿನಲ್ಲಿ ಕರೆಂಟು ಜಾಸ್ತಿ ಇದೆ' ಅಂದಿದ್ರಿ.

'ಏನಯ್ಯಾ ನಿನ್ನ ಐ. ಕ್ಯೂ. ಆ ಇಂಧನ ಮಂತ್ರಿಗೂ ಮೀರಿದೆಯಲ್ಲಾ, ಐ ಆ್ಯಯ್ ರಿಯಲಿ ಪ್ರೌಡ್ ಆಫ್ ಯು. ಅಪ್ಪಿತಪ್ಪಿ ನೀನೇನಾದರೂ ಎಂ.ಎಲ್.ಎ. ಆಗಿದ್ರೆ ನಿನಗೂ ಮಂತ್ರಿ ಸ್ಥಾನ ಸಿಕ್ತಿತ್ತು" ಎಂದರು ರಾಯರು.

ಇದು ವ್ಯಂಗ್ಯವೋ? ಹೊಗಳಿಕೆಯೊ? ತಿಳಿಯದಾಗಿ ನಾಚಿಕೆಯಿಂದ ನಾನು ತಲೆ ತಗ್ಗಿಸಿದೆ.

### ಸಾರಾಂಶ

ಒಂದಿಷ್ಟು ಉಪ್ಪು, ಒಂದಿಷ್ಟು ಕ್ಷಾರ,
ಒಂದಿಷ್ಟು ಸಿಹಿ, ಒಂದಿಷ್ಟು ಖಾರ,
ಹದವಾಗಿ ಬೆರೆಸಿ ಬಿಸಿಯಾಗಿ ಕುದಿಸಿ
ಒಗ್ಗರಿಸಿ ಸವಿಯಾಯ್ತು ಸಾರ.

ಒಂದಿಷ್ಟು ಮುನಿಸು, ಒಂದಿಷ್ಟು ನಗುವು,
ಒಂದಿಷ್ಟು ಖುಷಿ, ಒಂದಿಷ್ಟು ಬಿಗುವು,
ಹಿತವಾಗಿ ಪ್ರೀತಿ, ಮಿತವಾಗಿ ಕಲಹ
ರಸಪಾಕವಾಯ್ತು ಸಂಸಾರ.

### ವಿರಳಕೇಶಿಯ ಅಳಲು

ಅಡಿಗಡಿಗೆನ್ನ ಮುಡಿಯ
ಗುಡಿಯ ದೈವಕ್ಕೆ
ಮುಡಿಪು ಕೊಡುವಳೆನ್ನ
ಮಡದಿ!
ಕೇಶವಾ,
ಚನ್ನಕೇಶವಾ,
ರಕ್ಷಿಸಯ್ಯಾ ಅಳಿದುಳಿದ
ಎನ್ನ ಕೇಶವ!

– ಹರಿಕೃಷ್ಣ

# ಆತುರದ ಅನಂತ

**ವೈ.ಎಂ. ರಘುನಂದನ್**

ಮನೆ ಹತ್ತಿರವೇ ಶ್ರಾವಣ ಮಾಸದ ವಿಶೇಷ ಅಂತ ನಾಟಕ ಇತ್ತು. ಶನಿವಾರ ರಾತ್ರಿ 10 ಗಂಟೆಗೆ ಶುರು 'ಶನಿಪ್ರಭಾವ.' ಶನಿವಾರ ಬೆಳಿಗ್ಗೆಯಿಂದಲೇ ಮೈಕಾಸುರನ ಹಾವಳಿ ಆರಂಭವಾಗಿತ್ತು. ಗುರ್ತು, ಪರಿಚಯ ಇಲ್ಲದವರ ಗುಂಪೊಂದು ಬಂದಿತ್ತು. ''ಸಾರ್ ನಮಸ್ಕಾರ, ಹೇಗಿದ್ದೀರಿ'' ಅಂತ ವಿಚಾರಿಸಿದ್ದರು ಆತ್ಮೀಯತೆಯಿಂದ. ನಿವೃತ್ತಿ ಆದ ನಂತರ ಅವರು ಇವರು ಇರ್ಲಿ ಸ್ವತಃ ಧರ್ಮೇಚ, ಅರ್ಥೇಚ, ಕಾಮೇಚ ನಾತಿ ಚರಾಮಿ ಅಂತ ಪ್ರಾಮಿಸ್ ಮಾಡಿದ್ದ ಧರ್ಮಪತ್ನಿ, ನನ್ನಾಕೆಕೂಡ ಹೇಗಿದ್ದೀರಿ ಅಂತ ಕೇಳಿರಲಿಲ್ಲ. ಅವಳಾಯ್ತು ಅವಳ ಮಿತ್ರ ಮಾಡಳಿ ಆಯ್ತು. ಭಜನಾಮಂಡಳಿ, ಮಾಘಸ್ನಾನ, ಅಧಿಕಮಾಸ ಅಪೂಪದಾನ ಅಂತ ಒಂದಲ್ಲ ಒಂದು! ಓಲ್ಡ್ ಏಜಿನಲ್ಲೂ ಎಂಗೇಜ್ ಆಗಿದ್ದಳು.

ನಾನು 'ಓಬಮ' ಸಂಗಾತಿ. ಅಮೇರಿಕಾದ ಮಾಜಿ ಓಬಾಮ ಅಲ್ಲ. ಮನೇಲಿ ಭಾಮ ಇರುತ್ತಿರಲಿಲ್ಲವಾದ್ದರಿಂದ ಓಬಮ ಅಂದರೆ ಓದುವುದು, ಬರೆಯುವುದು, ಮಲಗಿರುವುದು ಸಂಗಾತಿ ಆಗಿತ್ತು. 'ಹೇಗಿದ್ದೀರಿ' ಅಂತ ವಿಚಾರಿಸಿದ ಗುಂಪು ಈಗ ಬಂದ ಉದ್ದೇಶ ತಿಳಿಸಿದರು. ಶನಿಪ್ರಭಾವ ನಾಟಕ ಆಡುತ್ತಿದ್ದೇವೆ, ಕಾಣಿಕೆ ಕೊಡಿ ಅಂತ, ನೂರು ಇನ್ನೂರಕ್ಕೆ ಒಪ್ಪಲಿಲ್ಲ, ನಿಮ್ಮ ಮನೆ ಹತ್ತಿರ ಆಡುತ್ತಿರೋದ್ರಿಂದ ಸಾವಿರ ಕೊಡಿ ಸಾವಿರ ಕೊಡಿ ಅಂತ ಒತ್ತಡ.

ಬೇಗ ಕಳಿಸೋ ಆತುರ ನನಗೆ, ಐನೂರು ಅವರ ಕೈಗೆ ಹಾಕಿದ್ದೆ.

''ಇದೇಂನ್ ಸಾರ್ ಇಷ್ಟೇಯ'' ಎಂಬ ಒಬ್ಬ,

''ಹೋದವರ್ಷ ಸಾವಿರ ಕೊಟ್ಟಿದ್ರಿ ಸಾ...'' ಮತ್ತೊಬ್ಬಹೇಳಿದ್ದ.

''ನೋಡಿ ಹೋದ ವರ್ಷ ಕೆಲಸದಲ್ಲಿದ್ದೆ ಕೊಟ್ಟಿದ್ದೆ, ಈಗ ನಿವೃತ್ತಿ ಆಗಿದೀನಿ... ಸಂಸಾರ ನಡೆಸ ಬೇಕಲ್ಲ ಪಿಂಚಣಿಯಲ್ಲಿ'' ಎಂದು ವಿವರಿಸಿದೆ.

''ಅಂದ್ರೆ.. ನಮಗೆ ಕೊಡೋ ಹಣ ಅರ್ಧ ಇಳಿಸಿದ್ದೀರಿ'' ಒಬ್ಬನ ಆಕ್ಷೇಪದ ನುಡಿ.

''ನಮ್ಮ ಹಣದಲ್ಲಿ ಸಂಸಾರ ನಡೆಸೋದು ಯಾವ ನ್ಯಾಯ ಸಾರ್'' ಕಪೀಲ್ ಸಿಬಾಲ್ ತರಹ ಪ್ರಶ್ನಿಸಿದ್ದ ಇನ್ನೊಬ್ಬ. ಇನ್ನೊಂದು ನೂರು ಕೈಯಲ್ಲಿ ಇಟ್ಟು ಹೋಗಿ ಬನ್ನಿ ನಿಮ್ಮ ನಾಟಕದ ಮುಖ್ಯ ಪಾತ್ರದಾರಿ ಅಂತೆ ಕಾಡದಿರಿ.. ಪ್ಲೀಸ್'' ಎಂದಿದ್ದೆ.

''ಹಿರೀ ನಾಗರೀಕರು ಅಂತ ಒಸಿ ಕನ್‌ಸೀಸನ್ ಕೊಡ್ತೋವ, ಬನ್ರಲ್ಲ..'' ಎಂದು ಕರ್ಣನಂತೆ ಮಹೋಪಕಾರದ ನುಡಿ ಆಡಿ ಹೊರಟಿದ್ದ ಎಲ್ಲರನ್ನೂ ಹೊರಡಿಸಿಕೊಂಡು.

ರಾತ್ರಿಯೆಲ್ಲಾ ನಾಟಕ, ಮಾತಿಗಿಂತ ಹಾಡೇ ಜಾಸ್ತಿ. ಸಂಗೀತದಲ್ಲಿ ಸಪ್ತಸ್ವರ ಕೇಳಿದ್ದೆ, ಆದರಿಲ್ಲಿ ಸಪ್ತ ಅಪಸ್ವರದಿಂದ ಕೂಡಿ 'ಸಾಡೆ ಸಾತಿ' ಆಗಿಕಾಡಿದ್ದರು ಇಡೀ ರಾತ್ರಿ, ಬೆಳಿಗ್ಗೆ ಮಂಗಳ ಹಾಡಿ, ಸೂರ್ಯೋದಯ ಆದನಂತರ ನನಗೆ ನಿದ್ರೆ ಹತ್ತಿತ್ತು. ಬೆಡ್‌ರೂಂ ಹೊರಗೆ 'ನೋ ಡಿಸ್ಟರ್ಬೆನ್ಸ್' ಅಂತ ಬೋರ್ಡ್ ಹಾಕಿ ಮಲಗಿಬಿಟ್ಟಿದ್ದೆ. ಭಾನುವಾರ ಆದ್ದರಿಂದ ಹೋಮ, ಹವನ ಅಂತ ಅರ್ಧಾಂಗಿ ಹೊರಗೆ ಹೋಗಿದ್ದಳು ಡೋರ್ ಲಾಕ್ ಮಾಡಿಕೊಂಡು.

‘‘ಏನು ಅದಕ್ಕೆ’’.... ಜೋರಾಗಿ ಸಿಡುಕಿ ಹೇಳಿದ್ದೆ, ಮೊದಲೇ ಗಾಭರಿ ಮನುಷ್ಯ. ಜೊತೆಗೆ ಸರಿಯಾಗಿ ಕೇಳಿಸಿಕೊಳ್ಳದ ಆತುರ ಬೇರೆ,

‘‘ಏನಿಲ್ಲ.. ನೀನು ಸತ್ತಿರಬಹುದು ಅಂತ ತಿಳಿದೆ. ಹೇಗಿದ್ರೂ ಅತ್ತಿಗೆ ಬಾಡಿ ತರೋದು ಗ್ಯಾರಂಟಿ ಆಯ್ತು. ಮನೆ ಮುಂದೆ ಬೆಂಕಿ ಹಾಕಿ, ಮುಂದಿನ ಏರ್ಪಾಡಿಗೆ ನನ್ನಿಂದ ಸಹಾಯ ಆದೀತು.. ಅಂತ ಬಂದೆ,’’ ಎಂದ.

‘‘ಈಗ ಹೇಳು ಅನಂತ... ಏನು ಅನಿಸ್ತಾ ಇದೆ ನಿನ್ಗೆ’’ ಸಹನೆ ಮೀರಿತ್ತು, ನಿದ್ದೆ ಗೆಟ್ಟೆಯೋ, ಬುದ್ದಿಗೆಟ್ಟೆಯೋ ಅಂತ ಗಾದೆ ಮಾತಿದೆ, ದುರುಗುಟ್ಟಿನೋಡಿಕೇಳಿದ್ದೆ.

‘‘ಸತ್ಯ ಹೇಳ ಬೇಕಂದ್ರೆ... ನೀನಿನ್ನೂ ಸತ್ತಿಲ್ಲವಲ್ಲ... ಏರ್ಪಾಡೆಲ್ಲ ಆಗಿದೆಯಲ್ಲ. ವೇಷ್ಟ ಆಗತ್ತಲ್ಲ, ಅಂತ ಅನ್ನಿಸ್ತಾ ಇದೆ’’ ತಡವರಿಸುತ್ತ ಹೇಳಿದ್ದ ಅನಂತ,

ಅಷ್ಟರಲ್ಲಿ ನನ್ನಾಕೆ ಗಾಡಿ ಜೊತೆ ಬಂದಿದ್ದಳು.

‘‘ಲೋ ನಿಂಗ... ಗಾಡಿಗೆ ಎಲ್ಲಾ ಸೌದೆ ತುಂಬಿ ಛತ್ರದಲ್ಲಿ ಪುರೋ ಹಿತರು ಹೇಳಿದ ಕಡೆ ಹಾಕಿಸು ಗಾಡಿಬಾಡಿಗೆ ಕೊಟ್ಟಾಗಿದೆ’’ ಎಂದು ಒಳಗೆ ಬಂದಿದ್ದಳು.

‘‘ಇದೇನು ಅನಂತ ಇಲ್ಲೇ ಇದ್ದಿ, ಹೋಮದ ಕಾರ್ಯಕ್ಕೆ ಇನ್ನೂ ಹೋಗಿಲ್ಲವೇ..’’ ಎಂದಳು.

‘‘ಅನಂತ, ನನ್ನ ಅಂತಿಮ ಕಾರ್ಯಕ್ಕೆ ಅಂತ ಆತುರವಾಗಿಬಂದಿದ್ದ. ಸದ್ಯ ಆ, ನಿಂಗ ‘ಗಾಡಿ’ ಅಂತ ಹೇಳಿದ್ದು ‘ಬಾಡಿ’ ಅಂತ ಕೇಳಿಸಿಕೊಂಡು ಮನೆ ಮುಂದೆ ಇನ್ನೂ ಅಗ್ನಿ ಸ್ಥಾಪಿಸಿರಲಿಲ್ಲ, ನೀನು ಬಂದಿ, ಹೋಗಿ ಕಾಫಿ ಬೆರೆಸಿ ತಗೊಂಡು ಬಾ. ಅನಂತ, ನೀನು, ಹೋಗುವಾಗ ಡೋರ್ ಲಾಕ್ ಜೊತೆಗೇ ಗೇಟ್‌ಗೆ ಬೀಗ ಹಾಕಿಕೊಂಡುಹೋಗಿ. ಕಾಫಿ ಕುಡಿದು ಮತ್ತೆ ಮಲಗುತ್ತೇನೆ. ಎಷ್ಟಾದರೂ ನಾನು ಗಟ್ಟಿಪಿಂಡ’’ ಎಂದು ನಕ್ಕಿದ್ದೆ. ಹೋದವಳು ಹೋಗುವಾಗ ಕಾಲಿಂಗ್ ಬೆಲ್ ಆಫ್ ಮಾಡದೆ ಹೋಗಿದ್ದಳು. ಶನಿಪ್ರಭಾವ ನಾಟಕ ಮುಗಿದ ನಂತರ, ಮನೆ ಹತ್ತಿರ ಇತ್ತೂಂತ, ‘ಮಹರಾಯ’ ನಮ್ಮನೆಗೇ ಆಗಮಿಸಿಬಿಟ್ಟಿದ್ದ.

ಒಳ್ಳೆ ಸಕ್ಕರೆ ನಿದ್ದೆ ಸಾಗಿತ್ತು. ಕಾಲಿಂಗ್‌ಬೆಲ್ ಒಂದೇ ಸಮನೆ ಹೊಡೆದು ಕೊಳ್ಳಲಾರಂಭಿಸಿತು. ಮೊದಲ ಎರಡು ಸಲ ಕೇಳಿಸಿದರೂ ಕೇಳದಂತಿದ್ದೆ ಮಲಗಿ. ಆದರೆ ಬೆಲ್ ಮತ್ತೆ ಮತ್ತೆ ಬಾರಿಸಿ, ನಿದ್ರೆ ಹಾಳುಮಾಡಿತ್ತು. ಭಾನುವಾರವೂ ಹಾಳು ಜನ ನಿದ್ರೆ ಮಾಡಲು ಬಿಡೋಲ್ಲ...ತಾವೂ ಮನೇಲಿ ಮಲಗಿರೋಲ್ಲ... ಎಂದು ಗೋಣಗುತ್ತಲೇ ಬಾಗಿಲು ತೆಗೆದೆ.

ಛಾಯಾ ಪುತ್ರನಂತೆ ಆಗಮಿಸಿದ್ದ ಆತುರದ ಅನಂತ, ಹಳೇ ಚಡ್ಡಿದೋಸ್ತು.

‘‘ಇದೇನೋ ರಾಘಣ್ಣ ಕಣ್ಣುಗ್ಗಳು ಕೆಂಡದಂತೆ ಇದೆ. ಕುಡಿಯೋದು ಕಲ್ತಿಯೇನೋ ರಿಟೈರ್ ಆದಮೇಲೆ’’ ಎಂದ ಗಾಭರಿಯಿಂದ.

‘‘ರಾತ್ರಿ ನಿದ್ದೆಗೆ ಗೆಟ್ಟಿದ್ದೆ... ಹಾಗಾಗಿ’’ ಎಂದೆ ಕೋಪ ನುಂಗಿಕೊಂಡು.

‘‘ಬಂದ ವಿಷಯವೇ ಮರ್ತೆ ನೋಡು, ನಮ್ಮನೆ ಆಳು ತಿಮ್ಮ ಹೇಳ್ದ.. ರಾತ್ರಿಯೆಲ್ಲಾ ರಾಘಣ್ಣವ್ರ ರೂಂ ದೀಪ ಉರೀತಿತ್ತು. ಅವ್ರಿಗೆ ಏನೋ ಆಗಿರಬೇಕು ಅಂತ. ಬೆಳಿಗ್ಗೆ ಬೇಗ ಬಂದು ಬೆಲ್ ಮಾಡ್ತಾನೇ ಇದೀನಿ, ಬಾಗಿಲು ತೆಗೆಯಲಿಲ್ಲ, ಆ ಮೂಲೆ ಮನೆ ನಿಂಗ ಹೇಳ್ದ, ‘‘ಅಮ್ಮಾವ್ರು ಬಾಡಿ ತರಕ್ಕೆ ಹೋದ್ರು’ ಅಂತ. ಮನೆ ಹೊರಗೆ ಸೌದೆ ಬಿದ್ದಿದೆ. ಕಾಯ್ತುನಿಂಗ ಕೂತಿದ್ದಾನೆ ಅದಕ್ಕೇ...

# ಆನ್- ಲೈನ್ ಅಜ್ಜಿ

**ಇ.ಆರ್. ರಾಮಚಂದ್ರನ್**

ಅಜ್ಜಿ ಎಂದಿನಂತೆ ಪೂಜೆ ಮಾಡಿ ತುಳಸಿ ಕಟ್ಟೆಯ ಹತ್ತಿರ ಕೂತರು.

ನಾನು ಅಲ್ಲೇ ಪೇಪರ್ ಓದ್ತಾ ಇದ್ದೆ..... ಇನ್ನು ಸ್ವಲ್ಪ ವರ್ಷದಲ್ಲಿ ಮೊದಲಿನ ಹಾಗೆ ಚಿಕ್ಕ ಮಕ್ಕಳು ಸ್ಕೂಲಿಗೆ ಒಂದು ಬರೀ ಸ್ಲೇಟಿನ ಹಾಗಿರುವ ಹಲಗೆ ತೊಗೊಂಡು ಹೋಗ್ತಾರಂತೆ. ಅದರಲ್ಲೇ ಬರಿಯೋದು, ಓದೋದು, ಅದೇ ಟೆಕ್ಸ್ಟ ಬುಕ್, ಟೆಸ್ಟ್ ಬುಕ್, ಮಿಸ್ ಕೊಡೋ ಹೋಮ್ ವರ್ಕ ಎಲ್ಲಾ. ಬಳಪ, ಪೆನ್ಸಿಲ್ ಇರಲ್ಲ! ಬರೀ ಒಂದು ತೋರು ಬೆರಳಿನಿಂದ ಬರಿಯೋದು ಅಷ್ಟೆ! ಹಾಡು, ಪಾಠ, ಪದ್ಯ, ಫೋಟೋ ಎಲ್ಲಾ ಹಲಗೆಯಿಂದಲೇ ಬರುತ್ತೆ! ಎಲ್ಲಾ ಆದ ಮೇಲೆ ಬೆರಳು ಚೀಪೋದು.

ಹಾಗೇ ಅಜ್ಜಿಯನ್ನು ನೋಡಿದೆ. ಪ್ರಾಥನೆ ಮಾಡಿ ಇನ್ನೂ ಕಣ್ಣು ಮುಚ್ಚಿ ಕುಳಿತಿದ್ದರು.

'ಅಜ್ಜಿ! ನೀನು ನನಗೆ ಅಕ್ಷರಾಭ್ಯಾಸ ಮಾಡಿಸ್ತಿದ್ದೆಯೆಲ್ಲಾ... ಜ್ಞಾಪಕವಿದಿಯಾ...?. ಲೈನಿನ ಮೇಲೇ ಬರೆಯಬೇಕೆಂದು ಹಠ ಹಿಡಿದು ಒಂದೇ ಸಮನೆ ಕಾಪಿ ಬರೆಸುತ್ತಿದ್ದೆ!'

'ಜ್ಞಾಪಕವಿಲ್ದೆ ಏನು? ನೀನು ಬರೆಯಲು ಶುರು ಮಾಡಿದ್ರೆ ಒಂದು ಲೈನು ಆಕಾಶಕ್ಕೆ ಹೋಗೋದು.. ಇನ್ನೊಂದು ಪಾತಾಳ ಹುಡುಕ್ಕೊಂಡು ಹೋಗೋದು. ಸ್ಲೇಟಿನಲ್ಲಿ ನಿನ್ನಮ್ಮ ಹಾಗೇ ಬರೆಯಲು ಬಿಟ್ಟಿದ್ದರಿಂದ ಅದೇ ಅಭ್ಯಾಸವಾಗಿ ನೀನು ಪುಸ್ತಕದಲ್ಲಿ ಬರೆಯುವಾಗ ಒಂದು ಪೇಜಿಗೆ ಎರಡೇ ಲೈನು ಗೀಚುತ್ತಿದ್ದೆ. ಒಂದು ಕಾಶ್ಮೀರಕ್ಕೆ, ಇನ್ನೊಂದು ಕನ್ಯಾಕುಮಾರಿಗೆ! ನಿನಗೆ ಎಲ್ಲಿ ಆಕಾಶ- ಭೂಮಿ ರಾಮಾಂತ ಕರಿತಾರೋಂತ ಹೆದರಿದ್ದೆ.'

'ನನ್ನ ಲೈನಿನ ಮೇಲೆ ಬರೆಸಿ ಬರೆಸಿ, ನೀನು ಕೊನೆಗೆ ಆನ್-ಲೈನ್ ಅಜ್ಜಿಯಾದೆ! ಹೀಗಾಗ್ತಿಯಾಂತ ನಿನಗೆ ಕನಸಿನಲ್ಲೂ ಬಂದಿರಲ್ಲ, ಅಲ್ವಾ?'

'ಕಣಿ ಕೇಳು ಹೋಗು. ನಾನಿರಲಿ.... ನಿಮ್ಮಪ್ಪನ ಕಾಲದಲ್ಲೂ ಆಗ ಇವೆಲ್ಲಾ ಇರಲಿಲ್ಲ! ಲೈನ್ ಅಂದ್ರೆ ಗೀಟು ಎಳೆಯುವುದು, ಇಲ್ಲ ಕರೆಂಟು ಬರದಿದ್ರೆ, ಲೈನ್ ಫಾಲ್ಟಾಗಿದೆ ಅಂತ ಗೊಣಗೋವ್ರು. ಅಷ್ಟೆ!'

'ಮುಂಚೆ ನೀನು ಮತ್ತು ನಿನ್ನ ಹರಿಕಥೆ ಫ್ರೆಂಡ್ಸು ಸೇರಿ ಇಡೀ ದಿನ ಸ್ಕಂದ ಪುರಾಣ, ವಟ ಸಾವಿತ್ರಿ ವ್ರತ, ಸೀತ ಕಲ್ಯಾಣ ಅಂತ ಓದಾಡ್ತಿದ್ರಿ....ಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ, ಹನುಮಾನ್ ಚಾಳಿಸ ಹಾಡ್ತಿದ್ರಿ. ಹಾಗಿರೋವ್ರು ಇದ್ದಕ್ಕಿದ್ದ ಹಾಗೆ ಟ್ರಾಕ್ ಬದಲಾಯಿಸಿ ಎಲ್ಲಾ ಸೇರಿ ಕಂಪ್ಯೂಟರ್ಸ್ ಕಲಿತ್ರಿ, ಈಗ ಒಬ್ಬರಿಗೊಬ್ಬರು ಇ-ಮೇಲ್ ಕಳಿಸ್ತೀರಾ,... ಟಿವಿಲಿ ಏನಾದ್ರೂ ಹೊಸ ತಿಂಡಿನೋ, ಅಡುಗೆನೋ ನೋಡಿದ್ರೆ ತಕ್ಷಣ ಎಲ್ಲಾರ್ಗೂ ಫೋನ್ನಲ್ಲಿ ಅಲರ್ಟ್ ಮಾಡ್ತೀರ.. ವಾಟ್ಸ್ ಆಪ್ನಿಂದ ಎಲ್ಲಾನೂ ಹಂಚಿಕೊಳ್ತೀರಾ. ಅಮೇಜ಼ಿಂಗ್...'

'ಅದೇನೋ ದೊಡ್ಡ ವಿಷಯ... ನಮ್ಮ ಸಾಫ್ಟ್‌ವೇರ್ ಸೀತಮ್ಮ....ಗುಳ್ಳಾವಟೆ, ಹಿತಕ ಬೇಳೆ, ಮೆಂತ್ಯದ ಗೊಜ್ಜು, ಹೀರೇ ಕಾಯಿ ತೊವ್ವೆ, ಗುಂತಪೊಂಗನಾಲು ಹೇಗೆ ಮಾಡೋದು ಅಂತ ತೋರಿಸಿ ಅದನ್ನು ಯೂ-ಟ್ಯೂಬ್ ನಲ್ಲಿ ಹಾಕ್ಲಿಲ್ವಾ? ನಮ್ಮ ಹರಿಣಿ.... ಮನೇಲಿ ಕೊಳಾಯಿ ಹಾಳಾದ್ರೆ ಅದನ್ನು ಡಾಕ್ಟರ್ ಫಿಕ್ಸಿಟ್ ಹಾಕಿ ಹೇಗೆ ರಿಪೇರ್ ಮಾಡೋದು.... ಬಾತ್ರೂಮ್ ಪೈಪಿA

ನಿಂದ ನೀರು ಸೋರ್ತಾ ಇದ್ರೆ ತೂತನ್ನು ಹೇಗೆ ಮುಚ್ಚೋದು... ಹಾಗೆ ಇನ್ನೊಂದು ಇಪ್ಪತ್ತು ವಿಷಯಗಳನ್ನು ತೋರಿಸಿ ವೀಡಿಯೋ ಮಾಡಿ, 'ನಾವೇ ಯಾಕೆ ರಿಪೇರಿ ಮಾಡ್ಬಾರ್ದು'? ಅಂತ ಫೇಸ್-ಬುಕ್ನಲ್ಲಿ ಹಾಕಿದ್ರು ನಮ್ಮ ಹಾರ್ಡ್‌ವೇರ್ ಹರಿಣಿ! ಅದಕ್ಕೆ ಸಾವಿರಕ್ಕೂ ಮೇಲೆ, 'ಲೈಕ್' ಬಂದಿದೆ.'

'ಹರಿಣಿ ಕೊಳಾಯಿ, ಪೈಪು ಮಾರೋ ಹಾರ್ಡ್‌ವೇರ್ ನವರಾ?'.

' ಅವರ ಯಜಮಾನ್ರು ಬಿವಿಕೆ ಐಯಂಗಾರ್ ರೋಡ್ನಲ್ಲಿ ಅದ್ರ ಷಾಪ್ ಇಟ್ಟಿದಾರೆ. ಅವುಗಳು ಹಾಳಾದ್ರೆ ಹೇಗೆ ರಿಪೇರಿ ಮಾಡ್ಬೇಕೇಂದು ಹರಿಣಿ ವೀಡಿಯೊ ಮಾಡಿದ್ರು. ಮುಂದಿನ ವಾರ ಲೀಲಾ ಹೋಟೆಲ್ನಲ್ಲಿ 'ಬಿಲ್ಡರ್ಸ್ ಅಸೋಸಿಯೇಷನ್' ಹರಿಣಿಗೆ ಸನ್ಮಾನ ಮಾಡ್ತಿದಾರೆ!'

'ಗ್ರೇಟ್ ಅಜ್ಜಿ! ನಿಜಕ್ಕೂ ಗ್ರೇಟೇ ಇದು'.

'ಪೂರ್ತಿ ಕೇಳೋ ಸೋಮಾರಿ! ಸೀತಮ್ಮಾಗೆ 'ಮಾಸ್ಟರ್ ಷೆಫ್' ನವರು ಅವ್ರ ರಿಯಾಲಿಟಿ ಷೋನಲ್ಲಿ ಜಡ್ಜಾಗಲು ಕರೆದಿದ್ದಾರೆ! ಇನ್ನು ಮೂರು ತಿಂಗಳು ಅವ್ರು ಇಲ್ಲಿ ಇರಲ್ಲ. ಮುಂಬೈ, ಕೊಲ್ಕೊತ, ಚೆನ್ನೈಗೆ ಹಾರಿ ಹೋಗುತ್ತಾರೆ. ಸಿಂಗಪೂರಿನಲ್ಲಿ ಫೈನಲ್ಸ್ ಅಂತೆ!'

'ಅಜ್ಜಿ! ನೀನೇ ಸುಂದರ್ ಪಿಚ್ಛೈ ತರಹ ಇವರಿಗೆಲ್ಲಾ ಗೂಗಲ್ ನಲ್ಲಿ ಅಕ್ಷರಾಭ್ಯಾಸ ಮಾಡ್ಸಿ ಎಲ್ಲಾರ್ನೂ ಫೇಮಸ್ ಮಾಡಿದೀಯ... ನೀನು ಗುಗ್ಗು ತರಹ ಹಾಗೇ ಇದ್ಬಿಡುತಿಯಾ ಏನಾದ್ರೂ ಮಾಡ್ಬೇಕೂಂತ ಇದೀಯಾ?'

'ಇಲ್ಲಿ ಕೇಳೊ! ನನ್ನ ಮನೆ ಔಷದಿ – ಹೊಟ್ಟೇನೋವಿನಿಂದ ಹಿಡಿದು, ಅಜೀರ್ಣ, ಉಬ್ಬಸ, ಕೀಲು ನೋವು, ತಲೆ ನೋವು, ಕಫ, ನಾಯಿ ಕೆಮ್ಮು, ತಲೆ ಕೂದಲು ಉದರೋದು ಇವಕ್ಕೆಲ್ಲಾ ನಾನು ಔಷದಿ ಮಾಡಿಕೊಟ್ಟಿದ್ದೇನೆ. ನಿನಗೆ ಆವಾಗಾವಾಗ ಕಿವಿ ನೋವು, ಮೂಗಿನಿಂದ ರಕ್ತ ಬರೋದು. ಅದಕ್ಕೆಲ್ಲಾ ಮನೇಲೆ ಔಷದಿ ಮಾಡ್ಕೊಡ್ತಿದ್ದೆ.'

'ಜ್ಞಾಪಕವಿದೆ. ಅದು ತಿಂದು ಸತ್ತೇ ಹೋಗ್ತಿನೋಂತ ಹೆದರ್ಕೆ ಆಗೋದು ಪ್ರತಿ ಸಲ!'

'ನನಗೂ ನೀನು ಬದುಕ್ತಿಯಾಂತ ನಂಬಿಕೆ ಇರಲಿಲ್ಲ! ಕೊನೆಗೆ ಕಲ್ಲು ಗುಂಡಿನ ಹಾಗೆ ಬೆಳದೆ.'

'ಅದನ್ನು ಏನು ಮಾಡ್ತಿಯಾ?'

'ಈಗ ಅದನ್ನೆಲ್ಲಾ ಕಂಪ್ಯೂಟರ್ಗೆ ಹಾಕಿ, ಟಿಪ್ಪಣಿ ಬರೆದು, ವಿಂಗಡಿಸಿ, 'ಅಜ್ಜಿ ಔಷದಿ' ಅಂತ ಮಾಡೀದೀನಿ. ಅದರ ಸಾರಾಂಶವವನ್ನು ಫೇಸ್ ಬುಕ್ಕಿಗೆ ಹಾಕ್ದಾಗ, ಡಬ್ಲ್ಯೂ. ಎಚ್. ಓ ಮತ್ತು ಯೂನಿಸೆಫ್ ನವರು ತಾವು ಅದನ್ನು ಪ್ರಮೋಟ್ ಮಾಡ್ತೀವಿ ಅಂತ ಇ-ಮೇಲ್ ಮಾಡಿದಾರೆ. ಮತ್ತೆ ಕಲರ್ಸ್, ಸ್ಟಾರ್

ಪ್ಲಸ್ ಛಾನಲ್ನವರು 'ದಾದಿ ಕಿ ಹಾಥ್ ಮೆ ಜಾದು' ಅಂತ ಸೀರಿಯಲ್ ಮಾಡ್ತಾರೆ'.

'ವ್ಹಾ! ಫೆನ್ಟಾಸ್ಟಿಕ್, ಐ ಸೆ! ನಾವು ಇದನ್ನು ಇವತ್ತೇ ಸೆಲಿಬ್ರೇಟ್ ಮಾಡ್ಬೇಕು'.

'ಅದಕ್ಕೆ ನನ್ನ ಹೊಸಾ ಡೈನಮೈಟ್ ಡೈಯೆಟ್ಟೂ ರೆಡಿಯಿದೆ. ಹಾಗಲಕಾಯಿಗೆ, ಮೂಲಂಗಿ, ಬೆಂಡೇಕಾಯಿ, ಬೆಳ್ಳುಳ್ಳಿ ಸೇರ್ಸಿ ಪಳದ್ಯ ಮಾಡ್ತಿನಿ. ಆರೋಗ್ಯಕ್ಕೂ ಒಳ್ಳೇದು. ಸದಾ ಸೋರೋ ನಿನ್ನ ಮೂಗಿಗೆ ಇದು ರಾಮಬಾಣ. ಸೆಲಿಬ್ರೇಷನ್ನೂ ಆಗುತ್ತೆ. ಹೊಸ ರೆಸಿಪಿ ಹೇಗಿದೇಂತ ನನ್ಗೂ ಗೊತ್ತಾಗುತ್ತೆ'.

'ಅಜ್ಜಿ! ನಿನ್ನ ಹೊಸಾ ರೆಸಿಪಿಯ ಐಟಮ್ ತಿಂದು ನಾನು ಕೈ ತೊಳಿಯಕ್ಕೆ ಏಳ್ತಿನೋ ಇಲ್ವೋ ಡೌಟೇ! ಸೆಲಿಬ್ರೇಷನ್ಗೆ ನನಗೆ ಇನ್ನೂ ಸ್ವಲ್ಪ ವಯಸ್ಸು, ಆಯಸ್ಸು ಆಗ್ಲಿ. ಆವತ್ತು ನಾನೇ ನಿನ್ನ ಕೇಳ್ತಿನಿ. ಇವತ್ತು ನನ್ನ ಬಿಟ್ಬಿಡು ದಮ್ಮಯ್ಯ!'


## ಆತ್ಮೀಯ ಓದುಗರಲ್ಲಿ ವಿನಂತಿ

ನಮ್ಮ ನಿಮ್ಮ ನಡುವೆ ಸಂಪರ್ಕ ಸೇತುವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ತಾವು ದಯಮಾಡಿ ತಮ್ಮ ಈ ಮೇಯ್ಲ್ ವಿಳಾಸ, ಮೊಬೈಲ್ ಸಂಖ್ಯೆ, ತಮ್ಮ ಹೆಸರನ್ನು ಸೇರಿಸಿ ಹಾಗೂ ಚಂದಾದಾರರ ಸಂಖ್ಯೆಯನ್ನು ಸೇರಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ.

koravanjiaparanji@gmail.com

ಅಪರಂಜಿ ಹವ್ಯಾಸೀ ಲೇಖಕರು ಸೇರಿ ನಡೆಸುತ್ತಿರುವ ಒಂದು ಸಾಹಸ. ಇದಕ್ಕೆ ಜಾಹೀರಾತು ದೊರಕಿದರೆ ನಮ್ಮ ಕೆಲಸ ಸುಗಮ. ಈ ನಿಟ್ಟಿನಲ್ಲಿ ತಾವು ಸಹಕರಿಸಲು ಇಚ್ಛಿಸಿದರೆ ದಯವಿಟ್ಟು ವಿವರಗಳಿಗೆ ನಮ್ಮನ್ನು ಸಂಪರ್ಕಿಸಿ:

koravanjiaparanji@gmail.com

# ನಗೆಯು ಬರುತಿದೆ ನನಗೆ

– ಎಂ.ಎಸ್.ಎಸ್. ಮೂರ್ತಿ

ನಗೆಯ ಮೇಲೊಂದು ಲೇಖನ ಬರೆಯಬೇಕೆಂದು ಕುಳಿತೆ. ಎಷ್ಟು ಹೊತ್ತಾದರೂ ಲೇಖನಿ ಕಾಗದದ ಮೇಲೆ ಸರಿಯಲೇ ಇಲ್ಲ. ತಲೆ ಕೆರೆದಷ್ಟೂ ಹೊಟ್ಟು ಬೀಳುತ್ತಿತ್ತೇ ಹೊರತು, ಐಡಿಯ ಹೊಳೆಯಲಿಲ್ಲ. ಜೀವನದಲ್ಲಿ ಎಂದೂ ನಗದವ, ಯಾರನ್ನೂ ನಗಿಸದವ, ಕಟ್ಟಿಗೆ ಮುಖದ ಈತ ಅದೆಂತಹ ನಗೆ ಲೇಖನ ಬರೆದಾನು; ನಗೆಪಾಟಲಾದೀತು ಎಂದು ಒಳಮನಸ್ಸು ಅಣಕಿಸಿತು. ಹೌದು. ನಕ್ಕಿಲ್ಲ, ನಗಿಸಿಲ್ಲ. ಆದರೆ, ನಕ್ಕವರನ್ನಾದರೂ ನೋಡಿದ್ದಾನಲ್ಲ. ಅದು ಸಾಲದೆ? ಎಂದು ಮನಸ್ಸಿನ ಇನ್ನೊಂದು ಭಾಗ ಸವಾಲು ಹಾಕಿತು. ಅನೇಕ ನಕ್ಕವರನ್ನು, ನಗುವವರನ್ನು ನೋಡಿದ್ದೇನೆ, ನೋಡುತ್ತಲೇ ಇದ್ದೇನೆ. ಅದೂ ಎಂತೆಂತಹ ನಗು– ಮನಮೋಹಕ ನಗು (ಮನಮೋಹನ್ ಸಿಂಗ್ ಎಂದಾದರೂ ನಕ್ಕಿದ್ದು ಕಂಡಿದ್ದೀರಾ? ಅದು ಬೇರೆ ವಿಷಯ) ಹೆಮ್ಮೆಯ ನಗು, ಅಟ್ಟಹಾಸದ ನಗು, ವಿಶಾದದ ನಗು, ಹುಚ್ಚು ನಗು, ತಿರಸ್ಕಾರದ ನಗು,...... ಹೀಗೆ ಅನೇಕ ತರಹದ ನಗುಗಳ ಚಹರೆಗಳನ್ನು ಕಂಡಿದ್ದೇನೆ.

ನಗೆಗಳೆಲ್ಲಾ ಅತ್ಯಂತ ಆಕರ್ಷಕ ನಗು ಮೋಲಾಳದ್ದು– ಅಯ್ಯಯ್ಯೋ, ಮೋನಿಕ ಲೆವನ್ಸ್ಕಿ ಅಲ್ಲ. ಮೋನ ಲಿಸಾ ಅವಳದ್ದು. ಅದೇ ರೀತಿಯ ನಿರ್ಲಿಪ್ತ ನಗು ನಮ್ಮ ಆದಿ ಶಂಕರಾಚಾರ್ಯರ ಮುಖದಲ್ಲಿಯೂ ಲಾಸ್ಯವಾಡುವುದನ್ನು ನೀವು ಗಮನಿಸಿರಬಹುದು. "ನೀವು ಕೇಳಿದಿರಿ, ನಾನು ಕೊಟ್ಟೆ" ಎಂಬಂತಹ ಒಂದು Non-committal ನಗು ಅದು. ಅದನ್ನು ನೋಡಿದಾಗಲೆಲ್ಲಾ ನನಗೆ ಇರುವೆ ಕತೆ ನೆನಪಾಗುತ್ತದೆ. "ನಾನು ಕಚ್ಚಿದೊಡನೇ ಸಾಯಬೇಕು" ಎಂದು ಇರುವೆ ದೇವರನ್ನು ವರ ಬೇಡಿತಂತೆ. ಆ ಭಗವಂತ ಇದೇ ರೀತಿ ನಕ್ಕು "ತಥಾಸ್ತು" ಎಂದಿರಬೇಕು. ಈ ರೀತಿಯ ನಗೆ ಈಚೆಗೆ ದೇವತಾ ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ ಎಂಬುದು ಬೇರೊಂದು ವಿಷಯ. ನಮ್ಮ ರಾಜಕಾರಣಿಗಳೂ "ನೀವು ಆಶ್ವಾಸನೆ ಕೇಳಿದಿರಿ, ನಾವು ಕೊಟ್ಟೆವು" ಎಂದು ಅದೇ ರೀತಿ ಕಿರುನಗೆ ತೋರಿಸುವುದನ್ನು ಕಲಿತುಬಿಟ್ಟಿದ್ದಾರೆ.

ಕಿರುನಗೆ ಎಂದಾಗ ನೆನಪಾಯಿತು. ನಾನೊಮ್ಮೆ ಚೆನ್ನಾಯಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಬ್ಬಾತನ ಭೇಟಿಯಾಯಿತು. ಆತನ ಹೆಸರೇ "ಕಿರುನಗೆ". ಯಾರು ಆ ಹೆಸರಿಟ್ಟರೋ ತಿಳಿಯದು. ಅದು ಒಂದು ರೀತಿಯಲ್ಲಿ ಅನ್ವರ್ಥ ನಾಮವಾಗಿತ್ತು. ಆತನ್ನು ನೋಡಿದರೆ ಬರೇ ಕಿರುನಗೆಯಲ್ಲ, ನಗೆ ಉಕ್ಕಿ, ಉಕ್ಕಿ ಬರುವಂತಿತ್ತು. ಕಾರ್ಕೋಟಕನ ವರಪಡೆದ ನಳಮಹಾರಾಜನ Cloneನಂತಿದ್ದ. "...ಅಡ್ಡ ಮೋರೆಯ, ಗೂನು ಬೆನ್ನಿನ, ಗೊಜ್ಜುಗೊರಲಿನ, ಹರುಕು ಗಡ್ಡದ, ಗಿಡ್ಡನಾದ ಕುರೂಪಿತನದಲಿ...." ಎಂಬ ಸಾಲಿನ ಪ್ರತಿಯೊಂದು ಚಹರೆಯೂ

ಅವನಲ್ಲಿ ಘನೀಭೂತವಾಗಿತ್ತು. ಅವನ ವೃತ್ತಿಯಾದರೂ ಏನು? ನಳನಂತೆ ಬಾಣಸಿಗ ಅಲ್ಲ. ಕೇವಲ ಒಬ್ಬ ಮಾಸ್ತರು. ಮಾಸ್ತರುಗಳಲ್ಲಿಯೂ ಬೇರೆ ಬೇರೆ ತರಹದ ಮಾಸ್ತರುಗಳಿರುತ್ತಾರಲ್ಲವೆ– ಸ್ಟೇಶನ್ ಮಾಸ್ತರು, ಅಂಚೆ ಮಾಸ್ತರು, ..., ಅಂತೆಲ್ಲಾ. ಅವರೆಲ್ಲಾ ಆ ವೃತ್ತಿಯಲ್ಲಿ ಮೇಲು ಜಾತಿಯವರು. ಈತ ಕಳಪೆ ಸ್ಕೂಲ್ ಮಾಸ್ತರ್. ಆದರೇನಂತೆ, ಅವನು ತರಗತಿಗೆ ಕಾಲಿಟ್ಟರೆ ಸಾಕು, ಮಕ್ಕಳಿಗೆಲ್ಲಾ ನಗುವೋ ನಗು!

ನಾನು ನಗುವಿನ ಕೆಲವು ಚಹರೆಗಳನ್ನು ನಿಮಗೆ ಪರಿಚಯಿಸಿದೆನಲ್ಲಾ, ಅವೆಲ್ಲಾ ಸ್ವಲ್ಪ ಹಳೆಯದೇ ಆಯಿತೇನೋ. ನನ್ನ ಗೆಳೆಯ ಸೀತಾರಾಮು ತನ್ನದೇ ಅನುಭವದಿಂದ ಎರಡು ಹೊಸ ಚಹರೆಗಳನ್ನು ಕಂಡುಕೊಂಡಿದ್ದಾನೆ. ಅಂತಹ ಅನುಭವ ನಿಮಗೂ ಆಗಿದ್ದರೆ ನೀವೂ ಅವುಗಳನ್ನು ಸುಲಭವಾಗಿ ಗುರುತಿಸುತ್ತೀರಿ. ಮನೆಗೆ ಯಾರಾದರೂ ಅತಿಥಿಗಳು ಬಂದರೆನ್ನಿ. ಅವರೊಡನೆ ಮಾತನಾಡುವಾಗ ಅಭ್ಯಾಗತ ದಂಪತಿಯ ಒಂದು ಭಾಗ (ಬೇಕಾದರೆ 'ದಂ' ಭಾಗ ಅಂದುಕೊಳ್ಳಿ) ಇನ್ನೊಂದು ಭಾಗದ ('ಪತಿ' ಭಾಗ ಅಂದುಕೊಳ್ಳಿ) (ಅವ)ಗುಣಗಳನ್ನು ಹಾಡಿ, ಜಾಲಾಡುವುದು ಕೆಲವು ಸಂಸಾರಗಳಲ್ಲಿ ವಾಡಿಕೆಯಾಗಿದೆ. ಅದು ಆಧುನಿಕತೆಯ, ಓಪನ್‌ನೆಸ್ ಕುರುಹೂ ಆಗಿರಬಹುದು. ಸೀತಾರಾಮುವಿನ ಸಂಸಾರದಲ್ಲಿಯೂ ಆ ವಾಡಿಕೆ ಹುಲುಸಾಗಿ ಬೆಳೆದು ಹೆಮ್ಮರವಾಗಿ ನಿಂತಿದೆ. ಈ ಚರ್ಯೆಯನ್ನು ಪ್ರತಿಭಟಿಸಿ ಪ್ರಯೋಜನವಿಲ್ಲವೆಂದು ಅವನಿಗೆ ಎಂದೋ ಅರಿವಾಗಿಹೋಗಿದೆ. ಅಂತಹ ಸಂದರ್ಭಗಳಲ್ಲಿ ಕುರಿಯಂತೆ ತಲೆ ತಗ್ಗಿಸಿ ಕೂತಿರುವುದೇ ಅವನ ಪದ್ಧತಿ. ಆದರೂ, ಗಂಡಸಲ್ಲವೇ. ಅವನಿಗೂ ಸ್ವಲ್ಪ 'ಅಹಂ' ಎಂಬುದು ಇದೆಯಲ್ಲ. ಎಲ್ಲವೂ ತನ್ನ ನಿಯಂತ್ರಣದಲ್ಲಿದೆ ಎಂದು ಅತಿಥಿಗೆ ತೋರಿಸಿಕೊಳ್ಳಲು ಮುಖದ ಮೇಲೆ ಒಂದು ವಿಡಂಬನಾತ್ಮಕ ನಗೆಯನ್ನು ಅಂಟಿಸಿಕೊಂಡಿರುತ್ತಾನೆ. ಅದನ್ನೇ ಅವನು 'ಆಧ್ಯಾತ್ಮಿಕ ನಗೆ' ಎನ್ನುವುದು. (ಅನಾಸಕ್ತಿ ಯೋಗದ ಅಭ್ಯಾಸ ಮಾಡಿದ್ದಾನೆ. ಆ ಅಭ್ಯಾಸ ನಿಮಗೆ ಇಲ್ಲದಿದ್ದರೆ ನೀವು ಅದನ್ನು 'ಅಸಹಾಯಕತೆಯ ನಗು' ಎಂತಲೋ, ಇನ್ನೆಂತಲೋ ಬದಲಾಯಿಸಿಕೊಳ್ಳಬಹುದು).

ಇದಕ್ಕೊಂದು ಕರೋಲರಿ ಕೂಡ ಇದೆಯಂತೆ. "ಹೇಳಿದ್ದೇ ಹೇಳೋ ಕಿಸಿಬಾಯಿ ದಾಸ" ಅಂತ ನಮ್ಮ "ದಂ" ಕೂಡ ಎಷ್ಟು ಬಾರಿ ಅತಿಥಿಗಳ ಎದುರಿಗೆ ಪತಿಯ ಅವಗುಣಗಳನ್ನೇ ಹಾಡಲು ಸಾಧ್ಯ. ಅದಕ್ಕೂ ಬೋರ್ ಆಗುವುದಿಲ್ಲವೆ? ಕೆಲವೊಮ್ಮೆ "ಪತಿಯ' ಸದ್ಗುಣಗಳನ್ನೂ ಹೆಕ್ಕಿ ತೆಗೆದು ಅತಿಥಿದೇವರ ಮುಂದೆ ಮಂಡಿಸುವುದಂತೆ. ಆಗ ಸೀತಾರಾಮುವಿಗೆ ಅನಿವಾರ್ಯವಾಗಿ ಅನುಮಾನ ಉಂಟಾಗುತ್ತದೆ. ಇದೇನು ಹೊಗಳಿಕೆಯೋ ಅಥವಾ ತೆಗಳಿಕೆಯ ಮತ್ತೊಂದು ರೂಪವೋ ಅಂತ. ಆಗ ಅವನ ಮುಖದಲ್ಲಿ ಮಿಂಚುವುದು 'ಅನಿಶ್ಚಿತ' ನಗೆ.

ಹೀಗೆ ನಗುವಿಗೆ ಅನೇಕ ಮುಖವಾಡಗಳು. ಆದರೆ ಈಗ ನಾನು ಹೇಳಬಯಸುವುದು ಈ ರೀತಿಯ "ಮುಸುಕಿನೊಳಗಿನ ಗುದ್ದಿನಂತಹ" ನಗೆಯ

ಬಗ್ಗೆ ಅಲ್ಲ. ದೊಡ್ಡದಾಗಿ ಬಾಯಿಬಿಟ್ಟು, ಮೈಕುಲುಕಿ ನಗುವ ಅಪ್ಪಟ ನಗೆ. ಬೇಂದ್ರೆಯವರ "ಧಗೆ ಇಲ್ಲದ ನಗೆ". ಚಾರ್ಲಿ ಚಾಪ್ಲಿನ್, ಲಾರೆಲ್ ಹಾರ್ಡಿ, ನರಸಿಂಹರಾಜು, ಬಾಲಕೃಷ್ಣ, ಮಾಸ್ಟರ್ ಹಿರಣ್ಣಯ್ಯ ಮುಂತಾದವರು ಉಕ್ಕಿಸುವ ಬುಗ್ಗೆ ಬುಗ್ಗೆ ನಗೆ. ಕಾರಂಜಿಯಂತೆ ಚಿಮ್ಮುವ ಈ ನಗೆಗೆ ಈಗ ಬಹಳ ಬೇಡಿಕೆಯಂತೆ. ಕಾರಣ, ಅದರಿಂದ ಮನಸ್ಸಿನ ಒತ್ತಡ ಇಳಿದು, ದೇಹದಲ್ಲಿ ರಕ್ತಸಂಚಾರ ವೃದ್ಧಿಯಾಗಿ, ರೋಗನಿರೋಧಕ ಶಕ್ತಿ ಜಾಸ್ತಿಯಾಗಿ, ಆರೋಗ್ಯ ಸುಧಾರಿಸುತ್ತದೆಂದು ವಿಜ್ಞಾನಿಗಳು ಕಂಡುಕೊಂಡಿದ್ದಾರಂತೆ. ನಕ್ಕಾಗ ಮುಖ, ಕುತ್ತಗೆಯಲ್ಲಿನ 16 ಸ್ನಾಯುಗಳು ಸಡಿಲವಾಗುತ್ತವಂತೆ. ಅಷ್ಟೇ ಅಲ್ಲ. ಮೈ ಎಲ್ಲಾ ಕುಲುಕಿ, ಕುಲುಕಿ ನಕ್ಕರೆ ದೇಹದ ಒಳ ಅಂಗಾಂಗಗಳಿಗೆಲ್ಲಾ ಚಲನೆ ದೊರತು ಇಂಟರ್ನಲ್ ಜಾಗಿಂಗ್ ಆಗುವುದೆಂದು ಅನುಭವಿಗಳು ಹೇಳುತ್ತಾರೆ. ಆದರೆ, ಇದರಲ್ಲಿ ಒಂದು ಸಮಸ್ಯೆ. ಸರ್ಕಸ್ ಬಫೂನ್‌ಗಳೂ ಮಾಯವಾಗುತ್ತಿರುವ ಈ ಕಾಲದಲ್ಲಿ ಕಾಸು ಕೊಟ್ಟರೂ ಹಾಸ್ಯ ಸಿಗದಂತಾಗಿದೆಯಲ್ಲ ಎಂಬುದು. ಆದರೆ, ಹೆದರ ಬೇಡಿ. "ಬ್ರಹ್ಮ ಕೈ ಬಿಟ್ಟರೂ ತಿಮ್ಮ ಕೈ ಬಿಡಲಿಲ್ಲ" ಅನ್ನೋ ಗಾದೆಯಂತೆ ಕೆಲವು ಮನಃಶಾಸ್ತ್ರಜ್ಞರು ಒಂದು ಪರ್ಯಾಯ ಮಾರ್ಗವನ್ನು ಕಂಡುಹಿಡಿದಿದ್ದಾರೆ. ಅದೇ ಲಾಫ್ಟರ್ ಅಣಕಗಳು. ದಿನಾ ಬೆಳಗ್ಗೆ ಜನರನ್ನು ಕಲೆ ಹಾಕಿ, "ಹ್ಹ 'ಹ್ಹ' ಹ್ಹಾ" 'ಹಿ' 'ಹ್ಹಿ' "ಹ್ಹೀ" ಎಂದು ಹದಿನೈದು ನಿಮಿಷ ಕೇಕೆಹಾಕಿ ನಗುವಂತೆ ಪ್ರಚೋದಿಸುತ್ತಾರೆ. Something is better than nothing ಅಲ್ಲವೆ? ಹಾಗಾಗಿ ಈ ರೀತಿ "ನಗೆ ಸಂಸ್ಥೆ"ಗಳು ಈಗ ನಾಯಿಕೊಡೆಯಂತೆ ಎಲ್ಲಡೆ ತಲೆ ಎತ್ತಿ ಅದೊಂದು ಲಾಭದಾಯಕ ವೃತ್ತಿಯಾಗಿದೆ.

ಎಲ್ಲ ಸಂಘ, ಸಂಸ್ಥೆಗಳೂ ವಾರ್ಷಿಕೋತ್ಸವ ಎಂಬ ಸಂಪ್ರದಾಯವನ್ನು ಆಚರಿಸುತ್ತವಲ್ಲವೆ. ನಗೆ ಸಂಸ್ಥೆಗಳೂ ಅದನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅವು ನಗಪಾಟಲಾಗಬೇಕಾದೀತು. ನಮ್ಮ ಸಂಸ್ಥೆ, ಮೊದಲನೇ ವಾರ್ಷಿಕೋತ್ಸವದ ಅಂಗವಾಗಿ 'ಹಾಸ್ಯ ದಿನಾಚರಣೆ"ಯನ್ನು ಬಹಳ ಅದ್ಧೂರಿಯಾಗಿ ನಡೆಸಬೇಕೆಂದು ಕಾರ್ಯಕ್ರಮ ಹಮ್ಮಿಕೊಂಡಿತ್ತು. ಅದಕ್ಕಾಗಿ ನಾಡಿನ ಮಹಾನ್ ಹಾಸ್ಯಗಾರರೊಬ್ಬರನ್ನು ಆಹ್ವಾನಿಸಲಾಗಿತ್ತು. ಸದಸ್ಯರೆಲ್ಲಾ, ನಗೆಯ ಕಡಲಿನಲ್ಲಿ ಮಿಂದಮೇಲೆ ಭಾರಿ ಭೋಜನದ ವ್ಯವಸ್ಥೆಯೂ ಇತ್ತು. ಅತಿಥಿಗಳು ಗಡದ್ದಾಗಿ ತಿಂಡಿ, ಕಾಫಿ ಹೊಡೆದು, ಹೂವಿನ ಹಾರ ಹಾಕಿಸಿಕೊಂಡು, ಬಾಯಿತುಂಬ ಹೊಗಳಿಸಿಕೊಂಡ ನಂತರ ವೇದಿಕೆ ಏರಿ, ಮೈಕ್ ಹಿಡಿದು ಒಂದು ಉದ್ದನೆಯ ಜೋಕ್ ಹೇಳಿದರು. ಆದರೆ, ಸಭಿಕರಿಂದ ಏನೂ ಪ್ರತಿಕ್ರಿಯೆ ಬರಲೇ ಇಲ್ಲ! ಪರವಾಗಿಲ್ಲ. ಇನ್ನೂ ಕಾವು ಏರಿಲ್ಲವೇನೋ ಎಂದುಕೊಂಡು ಮತ್ತೊಂದು ಜೋಕ್ ಬಿಟ್ಟರು. ಅದಕ್ಕೂ ಅದೇ ಗತಿ. ಮೂರನೆಯದೂ ಹಾಗೇ ತೇಲಿಹೋಯಿತು. ಸಭಿಕರಲ್ಲಿ ಅನೇಕರು ಏನೂ ಆಗುತ್ತಿಲ್ಲವೇನೋ ಎಂಬಂತೆ ಕಲ್ಲುಗುಂಡಾಗಿ ಕೂತಿದ್ದರು. (ಎದ್ದು ಹೋಗಲೂ ಇಲ್ಲ– ಊಟ ಬಾಕಿ ಇತ್ತಲ್ಲ). ಉಳಿದವರು ಮದುವೆ ಛತ್ರದಲ್ಲಿನಂತೆ ಮಗನಿಗೆ ಸಾಫ್ಟ್‌ವೇರ್ ಕಂಪನಿಯಲ್ಲಿ ಭಾರಿ ನೌಕರಿ ಸಿಕ್ಕಿದ್ದು, ಮಗಳ ಬಾಣಂತನಕ್ಕೆ ತಾವು ಎರಡನೇ ಬಾರಿ ಅಮೆರಿಕಾಕ್ಕೆ

ಹೋಗಲಿರುವುದು, ಹೀಗೆಲ್ಲಾ ಏನೆಲ್ಲಾ ಸ್ವಾರಸ್ಯ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದಾಗ, ಜೋಕ್‌ಗಳ ಕಡೆ ಅವರ ಗಮನ ಹೋಗಲೇ ಇಲ್ಲ. ಹಾಸ್ಯಗಾರರಾದರೇನಂತೆ. ಅವರಿಗೂ ಸ್ವಲ್ಪ ಸ್ವಾಭಿಮಾನ ಉಳಿದಿದೆಯಂತೆ. ಮೈಕ್ ಹಿಡಿದಿದ್ದ ಅವರು ಸಿಟ್ಟು ಬಂದು ಗುಡುಗಿದರು, "ನಿಮಗಾಗಿ ನಾನು ಎಷ್ಟೊಂದು ವಿಧವಿಧವಾದ ಜೋಕ್‌ಗಳನ್ನು ಸಂಪಾದಿಸಿ ತಂದಿದ್ದೇನೆ. ನೀವು ಮಾತ್ರ ಗುಡಿಯಲ್ಲಿರುವ ಮೂರ್ತಿಯಂತೆಯೋ, ಪಂಜರದಲ್ಲಿರುವ ಹಕ್ಕಿಗಳಂತೆಯೋ ವರ್ತಿಸುತ್ತಿದ್ದೀರ. ನನ್ನ ಮುಂದಿನ ಜೋಕಿಗಾದರೂ ನೀವು ನಗದೇ ಇದ್ದರೇ". ಅಷ್ಟು ಹೊತ್ತಿಗೆ ಸರಿಯಾಗಿ ನನ್ನ ಪಕ್ಕದಲ್ಲಿದ್ದವನು ಸೊಂಟಕ್ಕೆ ಬಿಗಿದಿದ್ದ ಸೆಲ್‌ಫೋನ್ "ಕಿಣಿಕಿಣಿ.....ಕಿಣಿಕಿಣಿ..." ಎಂದು ಗೊಣಗಲಾರಂಭಿಸಿತು. ಹಾಗಾಗಿ, "ಅಶ್ವತ್ಥಾಮ ಹತಃ.........." ದ ಉತ್ತರಾರ್ಧ ಕೃಷ್ಣನ ಶಂಖದ ಧ್ವನಿಯಲ್ಲಿ ಅಡಿಗಿಹೋದಂತೆ, ನಮ್ಮ ನಗೆಗಾರ ಮುಂದೆ ಏನು ಹೇಳಿದರೋ ನನಗೆ ಕೇಳಿಸಲೇ ಇಲ್ಲ.

ಅಂತೂ ಇಂತೂ ಮೊದಲನೇ ಸಮಾವೇಶ ಮುಕ್ತಾಯವಾಗಿ, ಊಟದ ಟೈಂ ಎಂದು ಘೋಷಣೆಯಾಯಿತು. ಕಾರ್ಯಕಾರಿ ಸಮಿತಿಯವರು ಇಲ್ಲಿ ಒಂದು ಎಡವಟ್ಟಿನ ಕೆಲಸ ಮಾಡಿದ್ದರು. ಬೆಳಗಿನ ಸಮಾವೇಶದಲ್ಲಿ ಸಭಿಕರೆಲ್ಲಾ ಹೊಟ್ಟೆ ತುಂಬಾ ನಕ್ಕಿರುತ್ತಾರೆ; ಅವರಿಗೆ ಹೆಚ್ಚು ಊಟ ಸೇರದು ಎಂದು ತಪ್ಪು ಲೆಕ್ಕಾಚಾರ ಹಾಕಿಬಿಟ್ಟಿದ್ದರು. ಹಾಗಾಗಿ ತರಿಸಿದ್ದ ಊಟ ಅರ್ಧದಷ್ಟು ಜನರಲ್ಲೇ ಮುಗಿದು ಹೋಯಿತು. ಮುಕ್ಕಾಲು ಗಂಟೆಯ ನಂತರ ಎರಡನೇ ಸಮಾವೇಶ ಎಂದು ಗಂಟೆ ಹೊಡೆದುಕೊಂಡಿತು. ಆದರೆ, ಹಾಲ್ ಮಾತ್ರ ಖಾಲಿ! ಉಂಡವರೆಲ್ಲ ನಿದ್ರೆ ಮಾಡಲು ಮನೆಗೆ ಹೋದರು; ಊಟ ಸಿಗದಿದ್ದವರು ಖಾಲಿ ಹೊಟ್ಟೆಯಲ್ಲಿ ಸಮಿತಿಯವರನ್ನು ಶಪಿಸುತ್ತಾ ಊಟಮಾಡಲು ಮನೆಗೆ ಹೋದರು.

ಅಲ್ಲಿಗೆ ನಮ್ಮ ಲಾಫ್ಟರ್ ಕ್ಲಬ್‌ನ ಅವತಾರವೂ ಸಮಾಪ್ತಿಯಾಯಿತು. ಆದರೆ, ಸಮಿತಿಯವರಿಗೆ ಅದರಿಂದೇನೂ ನಿರುತ್ಸಾಹವಾದಂತೆ ತೋರಲಿಲ್ಲ. ಹಿರಣ್ಯಕಶಿಪುವನ್ನು ಕೊಲ್ಲಲು ವಿಷ್ಣು ಧರಿಸಿದ ನರಸಿಂಹಾವತಾರ ಸ್ವಲ್ಪ ಕಾಲ ಮಾತ್ರವೇ ಇತ್ತಲ್ಲವೆ?. ಅದಕ್ಕೆ ಹೋಲಿಸಿದರೆ ನಮ್ಮ ಕ್ಲಬ್ ದೀರ್ಘಾವಧಿಯಾಗಿತ್ತೆಂದೇ ಅವರ ವಾದ! ಏನೇ ಇರಲಿ. ನಗರದ ಬೇರೊಂದು ಬಡಾವಣೆಗೆ ಹೋಗಿ ಹೊಸದೊಂದು ಕ್ಲಬ್ ಆರಂಭಿಸಿದರೆಂದು ಕೇಳಿದೆ.

ನನಗಾದರೋ ನಗೆಯ ವೈದ್ಯಕೀಯ ಲಾಭಗಳ ಬಗ್ಗೆ ಆಳವಾದ ನಂಬಿಕೆ ಮೂಡಿತ್ತು. ಹಾಗಾಗಿ ಅದನ್ನು ಹೇಗಾದರೂ ನಡೆಸಿಕೊಂಡು ಹೋಗಬೇಕೆಂಬ ಛಲ. ಮನೆಯ ಹತ್ತಿರದಲ್ಲಿ ಬೇರಾವ ಕ್ಲಬ್‌ಗಳೂ ಇರಲಿಲ್ಲ. ಹಾಗಾಗಿ, ನಾನೇ ದಿನಾ ಬೆಳಗ್ಗೆ, ಹದಿನೈದು ನಿಮಿಷ, ಸ್ವಯಂಪ್ರೇರಿತವಾಗಿ ನಗುವುದನ್ನು ಅಭ್ಯಾಸ ಮಾಡಿಕೊಂಡೆ– ಅದೂ ನಮ್ಮ Apartment complexನ ನೆಲಮಾಳಿಗೆಯ ಒಂದು ಮೂಲೆಯಲ್ಲಿ. ಒಮ್ಮೆ ನಾನು ಮಂಗನಂತೆ ಗಾಳಿಯಲ್ಲಿ ತೋಳು ಚೆಲ್ಲಿ, ಕಿರುಬನಂತೆ ಬಾಯಿತೆರೆದು, ಕರಡಿಯಂತೆ ಮೈಯೆಲ್ಲಾ ಕುಲುಕಿಸಿಕೊಂಡು "ಹ ಹ್ಹ ಹ್ಹಾ....ಹಿ ಹ್ಹಿ  ಹ್ಹೀ .... ಎಂದು ನಗುತ್ತಿದ್ದಾಗ, ನಮ್ಮ ಕೆಲಸದಾಕೆ ಅಲ್ಲಿ ಬಂದಳು. ನನ್ನ ಅವತಾರವನ್ನು ನೋಡಿ ಅವಳಿಗೆ ಅಘಾತವೇ ಆಗಿರಬೇಕು.

ಹೆಂಗಸಲ್ಲವೆ? ಆದರೂ ಕ್ಷಣಾರ್ಧದಲ್ಲಿ ಚೇತರಿಸಿಕೊಂಡು, ಏದುತ್ತಾ ಓಡಿಹೋಗಿ ನನ್ನ ಮನೆಯಾಕೆಗೆ "ಅಯ್ಯ ಅವರಿಗೆ ಏನೋ ಆಗಿಬಿಟ್ಟೈತೆ. ಹ ಹ್ಹ ಹ್ಹಾ... ಅಂತ ಕಿರುಚಿಕೊಂಡು ಕುಣಿದಾಡುತವ್ರೆ. ಬರ್ರವ್ವ ಬೇಗ" ಅಂತ ಹೇಳಿ ಎಳೆದುಕೊಂಡು ಬಂದಳು. ಆ ವೇಳೆಗಾಗಲೇ ನನ್ನ ಅಂದಿನ ಕೋಟ ಮುಗಿದು ದಣಿವಾರಿಸಿಕೊಳ್ಳುತ್ತಿದ್ದೆ. ಕೆಲಸದಾಕೆ ದೂರವೇ ನಿಂತು ನೋಡುತ್ತಿದ್ದಳು. ಅವಳ ಮುಖದಲ್ಲಿ ಗಾಭರಿ ತಾಂಡವಾಡುತ್ತಿತ್ತು. ನನ್ನಾಕೆ ಹತ್ತಿರ ಬಂದಳು. ಅವಳಿಗೆ ಎಲ್ಲಾ ಅರ್ಥವಾಯಿತು. ಎರಡು ಕೆಂಗಣ್ಣುಗಳನ್ನು ದೊಡ್ಡದಾಗಿ ಅಗಲಿಸಿ, ನೆಲಕ್ಕೆ ಕಾಲುಕುಕ್ಕಿ, ದುರ್ದಾನ ತೆಗೆದುಕೊಂಡವಳಂತೆ ನಿರ್ಗಮಿಸಿದಳು. ಕೆಲಸದಾಕೆ ಮಾತ್ರ "ಏನೋ ಹಿಡಿದು ಬುಟ್ಟೈತೆ. ಜೋಯಿಸಪ್ಪನ ಹತ್ರ ಕರಕೊಂಡುಹೋಗಿ ತಾಯಿತ ಗೀಯಿತ ಕಟ್ಟಿಸ್ರವ್ವಾ" ಎಂದು ತನಗೆ ತೋರಿದ ಸಲಹೆ ನೀಡಿದಳು. ನನ್ನ ಪುಣ್ಯ. ಕುತ್ತಿಗೆಗೆ ತಾಯಿತ ಅಂತೂ ಬೀಳಲಿಲ್ಲ. ಆದರೆ, ನನ್ನ One man laughter club ಅಂದಿಗೇ ಮುಕ್ತಾಯವಾಯಿತು. ಅಷ್ಟೇ ಅಲ್ಲ. ಅಂದಿನಿಂದ ಅಲ್ಲಿನ ಇತರ ಕೆಲಸಗಾರರು ಯಾರೇ ನನ್ನನ್ನು ನೋಡಿದರೂ, ಹಾವು ಕಂಡವರಂತೆ ದೂರ ಸರಿಯುತ್ತಿದ್ದರು.

ಆದರೆ, ನನಗಾದಂತೆ ಎಲ್ಲರಿಗೂ ನಗುವ ಪ್ರಯತ್ನ ನಗುಪಾಟಲಾದಂತೆ ತೋರುವುದಿಲ್ಲ. ಕಾರಣ, ಈಗ 'ನಗು ಚಿಕಿತ್ಸೆ'ಯ ಬಗ್ಗೆ ಜನ ನಗುವುದೂ ಇಲ್ಲ, ಹೆದರುವುದೂ ಇಲ್ಲ. ಅದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡುತ್ತಾರೆ. ಪ್ರತಿಯೊಂದು ಆಸ್ಪತ್ರೆಯಲ್ಲೂ ನಗು ಚಿಕಿತ್ಸೆಗೆ ಅವಕಾಶವಿರಬೇಕೆಂಬುದು ಕೆಲವರ ಅಭಿಪ್ರಾಯ. ಕೆಲವರಂತೂ ಅದಕ್ಕಾಗಿ ಒಂದು ವೆಬ್ ಸೈಟ್ ಸೃಷ್ಟಿಸಿದ್ದಾರೆ– ಡಬ್ಲ್ಯೂ.ಡಬ್ಲ್ಯೂ.ಡಬ್ಲ್ಯೂ.ಆರ್.ಎಕ್ಸ್ ಲಾಫ್ಟರ್ ಡಾಟ್. ಕಾಮ್. ಇಲ್ಲಿ ನಿಮ್ಮ ಮೌಸ್ ಕ್ಲಿಕ್ಕಿಸಿದರೆ ನೀವು ಎಷ್ಟಾದರೂ ನಗಬಹುದು. ಚೌತಿ ಚಂದ್ರನಿಗಾದ ಮುಖಭಂಗದ ಭಯವಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ಹಾಸ್ಯ ನಡೆದು ಬಂದ ದಾರಿಯ ಬಗ್ಗೆ ಸಾಕಷ್ಟು ಅಧ್ಯಯನ ನಡೆದಂತಿದೆ. ಹದಿನೆಂಟನೇ ಶತಮಾನಕ್ಕೆ ಮುಂಚೆ, ಯೂರೋಪಿನಲ್ಲಿ ದೊಡ್ಡದಾಗಿ ಬಾಯಿತೆಗೆದು ನಗುವುದು ಒಂದು ಅಸಭ್ಯ ನಡತೆಯಾಗಿತ್ತು. ಅದಕ್ಕೆ ಕಾರಣವೇನೋ ತಿಳಿಯದು– ಕೊಳೆತ ಹಲ್ಲುಗಳಿರಬಹುದೆ? ಆದರೆ, ದಂತಜ್ಞಾನ ಬೆಳೆದಂತೆ ಚಿನ್ನದ ದಂತಪಂಕ್ತಿಯನ್ನು ಪ್ರದರ್ಶಿಸುವುದು ಶ್ರೀಮಂತಿಕೆಯ ಲಕ್ಷಣವಾಯಿತೇನೋ. ಕಳೆದ ದಶಕದ ಬ್ರಿಟಿಶ್ ಪ್ರಧಾನಿ ಟೋನಿ ಬ್ಲೇರ್ ಅವರ ತುಟಿಗಳು ಕೂಡಿದ್ದನ್ನೇ ಯಾರೂ ಕಂಡಿಲ್ಲ. ಅವರನ್ನು ಟಿ.ವಿ.ಯಲ್ಲಿ ಕಂಡಾಗಲೆಲ್ಲಾ ಯಾವುದೋ ಟೂತ್‌ಪೇಸ್ಟ್‌ನ ಜಾಹಿರಾತು ನೆನಪಿಗೆ ಬರುತ್ತಿತ್ತು. ಅದೇ ದಶಕದಲ್ಲಿ ಅಲ್ಲಿ ಇನ್ನೊಂದು ಸಮಸ್ಯೆ ಕಾಣಿಸಿಕೊಂಡಿತಂತೆ. ಧರೋಡೆಕಾರರು ಸಾಮಾನ್ಯವಾಗಿ ಭಯಂಕರ ಮುಖವಾಡ ಧರಿಸಿ ಕಳ್ಳತನ ಮಾಡುತ್ತಾರೆ. ಇಂಗ್ಲಂಡಿನಲ್ಲಿ ಒಬ್ಬಾತ ನಗುಮುಖದ ಮುಖವಾಡ ಧರಿಸಿ ಬ್ಯಾಂಕ್ ಲೂಟಿ ಮಾಡಿದನಂತೆ. ಬ್ಯಾಂಕ್‌ನಲ್ಲಿದ್ದ ಸೆಕ್ಯುರಿಟಿ ಕ್ಯಾಮೆರಗಳಿಗೆ ತನ್ನ ನಗುಮುಖವನ್ನೇ ತೋರಿಸಿದನಂತೆ. ನಗುನಗುತ್ತಲೇ ಬ್ಯಾಂಕಿನಿಂದ ಹೊರಬಂದನಂತೆ. ಅದಕ್ಕೇ ಅಲ್ಲಿನ ಜನ ಅವನಿಗೆ The laughing

cavalier ಎಂದೇ ನಾಮಕರಣ ಮಾಡಿದ್ದರಂತೆ. ಅದೇ ಜಾಡು ಈಗ ನಮ್ಮಲ್ಲೂ ಕಂಡುಬರುತ್ತಿದೆ. ಹಲವಾರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಹಸ್ರಾರು ಕೋಟಿ ರೂಪಾಯಿ ದರೋಡೆ ಮಾಡಿರುವ ಗಣ್ಯ ವ್ಯಕ್ತಿಗಳ ಹಸನ್ಮುಖಿ ಚಿತ್ರಗಳನ್ನು ವೃತ್ತಪತ್ರಿಕೆಗಳಲ್ಲಿ, ಟಿ.ವಿ.ಯಲ್ಲಿ ನೀವು ನೋಡಿರಬಹುದು.

ನಮ್ಮಲ್ಲಿಯೂ ವಿಕಟಕವಿಗಳಿಗೆ ಸಾಂಪ್ರದಾಯಕವಾಗಿ ರಾಜಾಶ್ರಯವೇ ದೊರಕುತ್ತಿತ್ತು. ಬೀರಬಲ್, ತೆನಾಲಿ ರಾಮ ಮುಂತದವರು ಎಂತಹ ಬಿಕ್ಕಟ್ಟಿನ ಪರಿಸ್ಥಿತಿಯನ್ನೂ ಹಾಸ್ಯದಲ್ಲಿ ತೇಲಿಸಿಬಿಡುತ್ತದ್ದರು. ಆದರೆ, ಎಲ್ಲ ಹಾಸ್ಯಗಾರರಿಗೂ ಅಂತಹ ಒಳ್ಳೆ ಅದೃಷ್ಟ ಇದ್ದಂತೆ ಕಾಣುವುದಿಲ್ಲ. ರಾಣಿಯೋ, ರಾಜಕುಮಾರಿಯೋ ಡಿಪ್ರೆಶನ್‌ನಿಂದ ಪೆಚ್ಚುಮೋರೆ ಹಾಕಿಕೊಂಡು ಕೂತಿದ್ದರೆ, ರಾಜನಾದವನು ಕೂಡಲೇ ಊರಿನಲ್ಲಿ ಡಂಗುರ ಹೊಡೆಸುತ್ತಿದ್ದ, "ನಗಿಸಿದವರಿಗೆ ಅರ್ಧ ರಾಜ್ಯವನ್ನೋ, ರಾಜಕುಮಾರಿಯನ್ನೋ (ಅಥವಾ ರಾಣಿಯನ್ನೋ– "ಕಳೆದ್ಹೋಯ್ತುಂತ ಕುಣಿದಾಡ್‌ತೀನಿ ದೊಡ್ದೊಂದು ಕಾಟ ತೊಂದ್ರೆ") ಅಥವಾ ಇಬ್ಬರನ್ನೂ ಕೊಡಲಾಗುವುದು" ಎಂದು. ಅದಕ್ಕೆ ಆಸೆಪಟ್ಟು ಮುಂದೆ ಬಂದವರೆಷ್ಟೋ ಜನ. ಆದರೆ, ಆ ಪುಣ್ಯಾತಗಿತ್ತಿ ನಗದೇ ಹೋದರೆ ಅವರ ತಲೆ ಹೋಗುತ್ತಿತ್ತು. ಹಾಗೆ ತಲೆ ಕಳೆದುಕೊಂಡವರ ಸಂಖ್ಯೆಗೆ ಲೆಕ್ಕವಿಲ್ಲ. ಇಂದು ನಮ್ಮಲ್ಲಿ ನಗಿಸುವವರ ಸಂಖ್ಯೆ ಕಡಿಮೆಯಾಗಿದ್ದರೆ ಇದೂ ಒಂದು ಕಾರಣವಿರಬಹುದೆ?– ಅದೊಂದು ತಲೆ ಹೋಗುವ ಕೆಲಸವೆಂಬ ಭಾವನೆ!

ನಗು ಮತ್ತು ಹಾಸ್ಯ ಮನುಷ್ಯ ಮಾತ್ರ ಪ್ರದರ್ಶಿಸುವ ಪ್ರತಿಕ್ರಿಯೆ; ವಿಕಾಸದ ಏಣಿಯ ಇತರ ಹಂತಗಳಲ್ಲಿನ ಪ್ರಾಣಿಗಳು ನಗಲಾರವು ಎಂಬುದು ವಿಜ್ಞಾನಿಗಳ ನಂಬಿಕೆ. ಆದರೆ ಪ್ರಾಣಿಗಳು ನಮ್ಮನ್ನು ನಗಿಸಬಲ್ಲವು. ಈಚೆಗೆ, ಮಾನವ ತಳಿಯನ್ನು (DNA) ಸಂಶೋಧಿಸಿ ವಿಜ್ಞಾನಿಗಳು ಮನುಷ್ಯನ ತಳಿಗೂ, ಚಿಂಪಾಂಜಿಗಳ ತಳಿಗೂ ಶೇಕಡ 98 ಸಾಮ್ಯವಿದೆ. ಶೇಕಡ 2 ಮಾತ್ರ ವ್ಯತ್ಯಾಸ ಎಂದು ಘೋಷಿಸಿದರು. ಅದಕ್ಕೆ ಮನುಷ್ಯನ ಪ್ರತಿಕ್ರಿಯೆ ಏನೋ ತಿಳಿಯದು. ಆದರೆ, ಚಿಂಪಾಂಜಿಗಳು ಸಭೆ ಸೇರಿ ಅದನ್ನು ಪ್ರತಿಭಟಿಸಿ, Second opinion ಬೇಕೆಂದು ಆಗ್ರಹ ಮಾಡಿದವಂತೆ!

ಎಲ್ಲ ಮನುಷ್ಯರಲ್ಲೂ ಹಾಸ್ಯಪ್ರಜ್ಞೆ ಇರುತ್ತದೆಂದು ಹೇಳಲಾಗುವುದಿಲ್ಲ. Charity should begin at home ಎಂದು ಹೇಳುವಂತೆ, ತಮ್ಮನ್ನು ತಾವು ನೋಡಿಕೊಂಡು ಯಾರು ನಗುತ್ತಾರೋ ಅವರೇ ನಿಜವಾದ ಹಾಸ್ಯಗಾರರು. ಯಾರಿಗೆ ಆತ್ಮವಿಶ್ವಾಸ ಉಂಟೋ ಅವರೇ ಇತರರನ್ನೂ ನಗಿಸಬಲ್ಲರು. ಅದಿಲ್ಲದಿದ್ದವರು ಇತರರನ್ನು ನೋಡಿನಗುತ್ತಾತಷ್ಟೆ. ಸರ್‌ದಾರ್ಜಿಗಳ ಬಗ್ಗೆ ಪ್ರಚಲಿತವಿರುವ ಜೋಕ್‌ಗಳಲ್ಲಿ ಅನೇಕವನ್ನು ಸರ್‌ದಾರ್ಜಿಗಳೇ ಸೃಷ್ಟಿಸಿದ್ದೆಂದು ಖುಷವಂತ್ ಸಿಂಘ್ ಹೆಮ್ಮೆಯಿಂದ ಹೇಳಿ ದೊಡ್ಡದಾಗಿ ನಗುತ್ತಿದ್ದರಂತೆ!

ಹಾಗಾದರೆ, ಹಾಸ್ಯಪ್ರವೃತ್ತಿಗೆ ಮೂಲ ಯಾವುದು? ಅದು ವಂಶಪಾರಂಪರ್ಯವೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಲಂಡನ್ನಿನ ಕೆಲವು ತಜ್ಞರು 127 ಮಂದಿ ಅವಳಿಗಳನ್ನು ಒಳಗೊಂಡ ಅಧ್ಯಯನ ಮಾಡಿ, ಹಾಸ್ಯ

ನಮ್ಮ ಜೀನ್‌ನಲ್ಲಿ ಅಲ್ಲ; ಬೆಳೆಯುವ ಪರಿಸರದಲ್ಲಿ ಎಂದು ವರದಿಮಾಡಿದ್ದಾರೆ. ಹಾಗಾದರೆ ಹಿರಣ್ಣಯ್ಯನವರ ಮಗ ಹಿರಣ್ಣಯ್ಯನಾದದ್ದು ಹೇಗೆ ಎಂದು ನೀವು ಸವಾಲು ಹಾಕಬಹುದು. ಅದರಲ್ಲಿ ಒಬ್ಬ ತಂದೆ, ಮತ್ತೊಬ್ಬ ಮಗ ಎಂಬುದು ಕೇವಲ ಆಕಸ್ಮಿಕವಷ್ಟೆ. ಹಿರಿಯ ಹಿರಣ್ಣಯ್ಯನವರು ಸೃಷ್ಟಿಸಿದ ಹಾಸ್ಯ ಪರಿಸರಕ್ಕೆ ಮಾಸ್ಟರ್ ಹಿರಣ್ಣಯ್ಯ ಸ್ಪಂದಿಸಿರಬೇಕು. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಹಾಸ್ಯ ಸನ್ನಿವೇಶಗಳನ್ನು ಗುರುತಿಸುವ ಪ್ರತಿಭೆಯನ್ನು ಕೆಲವರಾದರೂ ಬೆಳಸಿಕೊಂಡು, ಹಾಸ್ಯಕ್ಕೆ ಒಂದು ಸಾಮಾಜಿಕ ಬುನಾದಿ ಒದಗಿಸಿದ್ದಾರೆ. ಹಾಸ್ಯಕವಿಗಳು, ಹಾಸ್ಯನಟರು, ವ್ಯಂಗ್ಯ ಚಿತ್ರಕಾರರು ಹಾಸ್ಯ ಮಾಧ್ಯಮಗಳ ಮೂಲಕ ಸಾಮಾಜಿಕ, ರಾಜಕೀಯ ಸುಧಾರಣೆಗಳನ್ನು ಮಾಡುತ್ತಿದ್ದಾರೆ. ಚಿಕ್ಕಮಗಳೂರಿನ ಒಬ್ಬ ಸ್ವಾಮೀಜಿ ತಮ್ಮೂರಿನ ರಸ್ತೆಗಳನ್ನು "ಹೆರಿಗೆ ರಸ್ತೆ"ಗಳೆಂದು ಹೇಳಿ ಅವುಗಳ ದುಃಸ್ಥಿತಿಗೆ ಕನ್ನಡಿ ಹಿಡಿದಿದ್ದರು. ನಾಲ್ಕು ನೂರು ವರ್ಷಗಳಹಿಂದೆಯೇ ಪುರಂದರ ದಾಸರು "ನಗೆಯು ಬರುತಿದೆ ನನಗೆ, ನಗೆಯು ಬರುತಿದೆ/ಜಗದೊಳಿರ್ಪ ಮನುಜರೆಲ್ಲ ಹಗರಣ ಪಡುವುದ ನೋಡಿ........" ಎಂದು ಶಂಕರಾಭರಣದಲ್ಲಿ ಹಾಡಿ, ಜನಜಾಗೃತಿಯನ್ನು ಸೃಷ್ಟಿಸಿರಲಿಲ್ಲವೆ? ದಾಸರೇನಾದರೂ ಇಂದು ಇದ್ದಿದ್ದರೆ ದೇವೇಗೌಡ, ಯಡಿಯೂರಪ್ಪ, ಸಿದ್ದರಾಮಯ್ಯ, ಅಮಿತ್ ಶಾ, ನರೇಂದ್ರ ಮೋದಿ, ರಾಹುಲ ಗಾಂಧಿ, ಸೋನಿಯ ಅಜ್ಜಿ, ಇತ್ಯಾದಿ ರಾಜಕೀಯ ಧುರೀಣರು ಅವರಿಗೆ ನಗೆ ಬರಿಸಿ ಹೊಟ್ಟೆ ಹುಣ್ಣಾಗಿಸುತ್ತಿದ್ದರೇನೋ.

ಕೊನೆಯದಾಗಿ, ಈಗ್ಗೆ ಸುಮಾರು ವರ್ಷಗಳಹಿಂದೆ ಕೆಂಪೇಗೌಡ ಬಸ್ ನಿಲ್ದಾಣದ 20 ನೇ ಪ್ಲಾಟ್‌ಫಾರಂ ಕಡೆಗೆ ನಡೆದು ಬರುತ್ತಿದ್ದರೆ, ಹಣವೇ ಪ್ರಧಾನವಾಗಿರುವ ಈ ವ್ಯಾಪಾರೀ ಜಗತ್ತಿನಲ್ಲಿಯೂ ನಿಮಗೊಂದು ಆಶ್ಚರ್ಯ ಕಾದಿರುತ್ತಿತ್ತು. "ಇಲ್ಲಿ ನೀವು ಉಚಿತವಾಗಿ ಮೂತ್ರ ಮಾಡಬಹುದು" ಎಂದು ದಪ್ಪ ಅಕ್ಷರಗಳಲ್ಲಿ ಬರೆದ ಶುದ್ಧ ಕನ್ನಡದ ಫಲಕ ನಿಮ್ಮನ್ನು ಸ್ವಾಗತಿಸುತ್ತಿತ್ತು. ಅದಕ್ಕಿಂತ ನಿರಾಳ ಸ್ಥಿತಿ ಇನ್ನೇನಿದ್ದೀತು! ಆದರೆ, ಈಗ ಅದು ಇದೆಯೋ ಇಲ್ಲವೋ ಗೊತ್ತಿಲ್ಲ.

## ಲಕ್ಕಿ ತಂದೆ

ವಿವಾಹದ ಆರತಕ್ಷತೆಯ ಭೋಜನ ಕೂಟದ ಸಂದರ್ಭ. ನವವಧು ತಂದೆಯ ಹತ್ತಿರ ಬಂದು ಅವರ ಕೈಯಲ್ಲಿ ಏನನ್ನೋ ಇಟ್ಟು ನಕ್ಕಳು. ತಂದೆ ಅದನ್ನು ನೋಡಿ ಸಂತಸದ ಮುಖ ಮಾಡಿದರು. ನಂತರ ಎಲ್ಲರನ್ನೂ ಉದ್ದೇಶಿಸಿ ಹೇಳಿದರು. ಸ್ನೇಹಿತರೇ, ಕಡೆಗೂ ನನ್ನ ಮಗಳು ನನ್ನ ಕ್ರೆಡಿಟ್ ಕಾರ್ಡನ್ನು ನನಗೆ ಹಿಂದಿರುಗಿಸಿದ್ದಾಳೆ. ಎಲ್ಲರೂ ಸಂತಸದಿಂದ ಚಪ್ಪಾಳೆ ತಟ್ಟಿದರು. ಆ ಗುಂಪಿನಲ್ಲಿ ಪೆಚ್ಚಾಗಿದ್ದವನು ಒಬ್ಬನೇ, ಅವನು ಮದುವೆಯಾದ ಗಂಡು.